# ದಿನಾಂಕ:18-09-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 02 (15)/2013-14

ಟಿಪ್ಪಣಿಯಲ್ಲಿ ವಿವರಿಸುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಪಾಲಿಕೆಯ ಆಸ್ತಿಗಳನ್ನು ಅಂದರೆ ಉದ್ಯಾನವನ/ಆಟದ ಮೈದಾನ/ಖಾಲಿ ಜಾಗಗಳು/ಪಾಠಶಾಲೆಗಳು/ಆಸ್ಪತ್ರೆಗಳು/ ಶೌಚಾಲಯಗಳು/ಗುತ್ತಿಗೆ ನೀಡಿರುವ ಆಸ್ತಿಗಳು ಇನ್ನು ಮುಂತಾದ ಪಾಲಿಕೆ ಆಸ್ತಿಗಳನ್ನು ಅಳತೆ ಮಾಡಿ ವಾರ್ಡ್‌ವಾರು ಆಸ್ತಿವಹಿಗಳನ್ನು ತೆರೆದು ಅವುಗಳಲ್ಲಿ ನಿರ್ಧಿಷ್ಟವಾದ ಅಳತೆ, ವಿಸ್ತೀರ್ಣ ಹಾಗೂ ಚಕ್ಕುಬಂದಿ ಮುಂತಾದ ವಿವರಗಳನ್ನು ನಮೂದಿಸುವ ಉದ್ದೇಶಕ್ಕಾಗಿ 24 ಜನ ನಿವೃತ್ತ ಭೂಮಾಪಕರು ಹಾಗೂ 4 ಜನ ನಿವೃತ್ತ ಭೂ-ಪರ್ಯಾವೇಕ್ಷಕರನ್ನು ಸರ್ಕಾರದ ಸಂಖ್ಯೆ:ನಅಇ/370/ಎಂಎನ್‌ಯು/2007, ದಿನಾಂಕ:02-11-2007 ರಲ್ಲಿ ನಮೂದಿಸಿರುವ ಸರ್ಕಾರದ ಆದೇಶದಂತೆ ಕೆ.ಎಂ.ಸಿ.ಕಾಯ್ದೆ-1976 ನಿಯಮ 20(ಎ) ರನ್ವಯ ದಿನಾಂಕ:01-01-2008 ರಿಂದ ಅನ್ವಯವಾಗುವಂತೆ 2-ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನಿವೃತ್ತ ಭೂಮಾಪಕರಿಗೆ ಮಾಸಿಕ ರೂ.10,000/- ಮತ್ತು ಪರ್ಯಾವೇಕ್ಷಕರಿಗೆ ಮಾಸಿಕ ರೂ.12,000/- ಗಳ ಸಂಚಿತ ವೇತನ ನಿಗಧಿಪಡಿಸಿ ನೇಮಕ ಮಾಡಿಕೊಳ್ಳಲಾಗಿತ್ತು.

ಪಾಲಿಕೆಯ ವ್ಯಾಪ್ತಿಯ 8 ವಲಯಗಳಲ್ಲಿ (198 ವಾರ್ಡ್‌ಗಳು) ಸುಮಾರು 5000 ಪಾಲಿಕೆ ಆಸ್ತಿಗಳು ಇರುವುದಾಗಿ ಅಂದಾಜಿಸಿ, ಇವುಗಳನ್ನು ಅಳತೆ ಮಾಡಿ ನಕ್ಷೆ ತಯಾರಿಸಲು ಪ್ರತಿ ವಲಯಕ್ಕೆ 2-3 ಜನ ಭೂಮಾಪಕರನ್ನು ನಿಯೋಜಿಸಿ 2-ವರ್ಷಗಳ ಅವಧಿಯಲ್ಲಿ ನಿವೃತ್ತ ಭೂ-ಪರ್ಯಾವೇಕ್ಷಕರ ನೇತೃತ್ವದಲ್ಲಿ ಸುಮಾರು 2420 ಪಾಲಿಕೆ ಆಸ್ತಿಗಳನ್ನು ಅಳತೆ ಮಾಡಿಸಿ, ನಕ್ಷೆಗಳನ್ನು ತಯಾರಿಸಲಾಗಿರುತ್ತದೆ. ಇದರ ಜೊತೆಗೆ ಇದೇ ಅವಧಿಯಲ್ಲಿ ಚುನಾವಣಾ ಮಾರ್ಗಸೂಚಿ ನಕ್ಷೆಗಳನ್ನು ತಯಾರು ಮಾಡಿಸಲಾಗಿದೆ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ 16 ಕೆರೆಗಳನ್ನು ಅಳತೆ ಮಾಡಿಸಿ ಸುಮಾರು 69 ಎಕರೆ 06 ಗುಂಟೆ ಒತ್ತುವರಿ ಪ್ರದೇಶವನ್ನು ಪತ್ತೆ ಮಾಡಿಸಲಾಗಿದೆ ಹಾಗೂ ಮಿಲ್ಲರ್‌ಟ್ಯಾಂಕ್ ರಸ್ತೆ ಏರಿಯಾದಲ್ಲಿ ಇರುವ ಬಿಳೇಕಹಳ್ಳಿ ಗ್ರಾಮದ ಸ.ನಂ.16, 18, 19ರ ಗಡಿಗಳನ್ನು ಗುರ್ತುಮಾಡಿಸಿ 56 ಬ್ಲಾಕುಗಳ ನಕ್ಷೆಗಳನ್ನು ತಯಾರು ಮಾಡಿಸಲಾಗಿದೆ ಮತ್ತು ಮಾನ್ಯ ಉಚ್ಚನ್ಯಾಯಾಲಯದ ಸೂಚನೆಗಳಂತೆ ಯಲಹಂಕ ವಲಯದ ನ್ಯಾಯಾಂಗ ಬಡಾವಣೆಯಲ್ಲಿರುವ ಸಿ.ಎ.ನಿವೇಶನ, ಉದ್ಯಾನವನ ಹಾಗೂ ಇತರೆ ಜಾಗಗಳನ್ನು ಅಳತೆ ಮಾಡಿಸಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಲು ಇವರ ಸೇವೆಯನ್ನು ಉಪಯೋಗಿಸಿಕೊಳ್ಳಲಾಗಿರುತ್ತದೆ. ಈ 2 ವರ್ಷಗಳ ಪ್ರಾರಂಭದಲ್ಲಿ 24 ಜನ ನಿವೃತ್ತ ಭೂಮಾಪಕರು ಕರ್ತವ್ಯಕ್ಕೆ ಹಾಜರಾಗಿದ್ದರೂ ಸಹ ಇವರ ವೈಯಕ್ತಿಕ ಕಾರಣಗಳ ಹಿನ್ನಲೆಯಲ್ಲಿ ಆಗಿಂದಾಗ್ಗೆ ಕರ್ತವ್ಯವನ್ನು ಬಿಟ್ಟು ಹೋಗಿದ್ದು, ಈ ಅವಧಿಯಲ್ಲಿ ಸರಾಸರಿ 15-16 ಜನ ನಿವೃತ್ತ ಭೂಮಾಪಕರು ಹಾಗೂ 4 ಜನ ನಿವೃತ್ತ ಭೂ-ಪರ್ಯಾವೇಕ್ಷಕರು ಕರ್ತವ್ಯ ನಿರ್ವಹಿಸಿರುತ್ತಾರೆ.

ಬಾಕಿ ಉಳಿದಿರುವ ಪಾಲಿಕೆ ಆಸ್ತಿಗಳ ಅಳತೆ ಕಾರ್ಯಗಳನ್ನು ಪೂರ್ಣಗೊಳಿಸಲು ಇವರ ಸೇವೆಯು ಅತ್ಯವಶ್ಯಕವಾಗಿಬೇಕಾದ ಹಿನ್ನಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ನಅಇ/18/ಎಂಎನ್‌ಯು/2010, ದಿನಾಂಕ: 08-07-2010 ಮತ್ತು ನಅಇ/534/ಎಂಎನ್‌ಯು/2010, ದಿನಾಂಕ:12-07-2011 ರಲ್ಲಿ ನಮೂದಿಸಿರುವ ಸರ್ಕಾರದ ಆದೇಶದಂತೆ ಇವರ ಸೇವೆಯನ್ನು ದಿನಾಂಕ:01-01-2010 ರಿಂದ 31-12-2010 ರವರೆವಿಗೆ ಮತ್ತು ದಿನಾಂಕ:01-01-2011 ರಿಂದ 31-12-2011 ರವರೆವಿಗೆ ವಿಸ್ತರಿಸಲಾಗಿರುತ್ತದೆ. ಈ ಎರಡು ವರ್ಷಗಳ ಅವಧಿಯಲ್ಲಿ ಕ್ರಮವಾಗಿ ಸರಾಸರಿ 15 ಮತ್ತು 12 ಜನರಂತೆ ಭೂಮಾಪಕರು ಹಾಗೂ 4 ಜನ ಭೂಪರ್ಯಾವೇಕ್ಷಕರು ಕಾರ್ಯನಿರ್ವಹಿಸಿದ್ದು, 1892 ಪಾಲಿಕೆ ಆಸ್ತಿಗಳನ್ನು ಅಳತೆ ಮಾಡಿ ನಕ್ಷೆ ತಯಾರಿಸಿರುತ್ತಾರೆ. ಈ ಪಾಲಿಕೆ ಆಸ್ತಿಗಳ ಅಳತೆ ಕೆಲಸದ ಜೊತೆಗೆ ಕಸ ವಿಲೇವಾರಿಗಾಗಿ ಪಾಲಿಕೆಗೆ

.............................2

ಹಸ್ತಾಂತರಗೊಂಡಿರುವ 4 ಸ್ಥಳಗಳಲ್ಲಿನ 370 ಎಕರೆ 5 ಗುಂಟೆ ಪ್ರದೇಶದ ಅಳತೆ ಮತ್ತು 8 ವಲಯಗಳ ವ್ಯಾಪ್ತಿಯಲ್ಲಿ ಬರುವ ಕೊಳಚೆ ಪ್ರದೇಶಗಳ ಹಾಗೂ ರಾಜಕಾಲುವೆಗಳ ಅಳತೆ ಮತ್ತು ರಸ್ತೆ ಅಗಲೀಕರಣಕ್ಕಾಗಿ ಭೂಸ್ವಾಧೀನ ಪ್ರದೇಶಗಳ ಅಳತೆ, ಖಾತೆ ಬದಲಾವಣೆಗಳಲ್ಲಿ ವಿವಾದಾಸ್ಪದವಾದ ಪ್ರಕರಣಗಳ ಅಳತೆ ಮುಂತಾದ ಕಾರ್ಯಗಳಿಗೆ ವಲಯ ಕಛೇರಿಯ ಅಧಿಕಾರಿಗಳು ಉಪಯೋಗಿಸಿಕೊಂಡಿರುತ್ತಾರೆ.

ಡಿಸೆಂಬರ್-2011ರ ಅಂತ್ಯಕ್ಕೆ ನಿವೃತ್ತ ಭೂಮಾಪನ ಸಿಬ್ಬಂದಿಯಿಂದ ಒಟ್ಟು 4312 ಪಾಲಿಕೆ ಆಸ್ತಿಗಳನ್ನು ಮೇಲೆ ವಿವರಿಸಿರುವ ಇತರೆ ಅಳತೆ ಕೆಲಸಗಳ ಜೊತೆಗೆ ಅಳತೆ ಮಾಡಿಸಿದ್ದು, ಇವುಗಳ ನಕ್ಷೆ ಹಾಗೂ ಇತರೆ ವಿವರಗಳನ್ನು ಕಛೇರಿಯಲ್ಲಿ ವಾರ್ಡ್‌ವಾರು ವಹಿಗಳಲ್ಲಿ ನಮೂದಿಸಲಾಗುತ್ತಿದೆ.

ಖಾಯಂ ಭೂಮಾಪನ ಸಿಬ್ಬಂದಿಯ ತೀವ್ರ ಕೊರತೆಯಿರುವ ಕಾರಣ, 8 ವಲಯ ಅಧಿಕಾರಿಗಳು ತಮ್ಮ ಕಛೇರಿಯ ದಿನನಿತ್ಯದ ತುರ್ತು ಕಾರ್ಯಗಳಿಗೆ ನಿವೃತ್ತ ಭೂಮಾಪನ ಸಿಬ್ಬಂದಿಯ ಸೇವೆಯನ್ನು ಉಪಯೋಗಿಸಿಕೊಳ್ಳುತ್ತಿರುತ್ತಾರೆ ಹಾಗೂ ಹಾಲೀ ನಿವೃತ್ತ ಭೂಮಾಪನ ಸಿಬ್ಬಂದಿಯು ಅಗತ್ಯಕ್ಕಿಂತ ಕಮ್ಮಿ ಇದ್ದು, ಈಗ ಕೇವಲ 12 ಜನ ನಿವೃತ್ತ ಭೂಮಾಪಕರು ಹಾಗೂ 3 ಜನ ನಿವೃತ್ತ ಭೂಪರ್ಯಾವೇಕ್ಷಕರು ಮಾತ್ರ ಕೆಲಸ ನಿರ್ವಹಿಸುತ್ತಿರುತ್ತಾರೆ.

ನಿವೃತ್ತ ಭೂಮಾಪನ ಸಿಬ್ಬಂದಿಯ ನೇಮಕಾತಿ ಅವಧಿಯು 31-12-2011ಕ್ಕೆ ಮುಕ್ತಾಯಗೊಂಡಿರುತ್ತದೆ. ಆದರೆ, ಇನ್ನು ಸುಮಾರು 1000ಕ್ಕೂ ಹೆಚ್ಚಿನ ಪಾಲಿಕೆ ಆಸ್ತಿಗಳ ಅಳತೆ ಕಾರ್ಯ ಬಾಕಿ ಇರುತ್ತದೆ ಹಾಗೂ ಈ ಕೆಳಕಂಡ ಕಾರ್ಯಗಳು ಇನ್ನೂ ನಿರ್ವಹಿಸಬೇಕಾಗಿರುವುದರಿಂದ, ಇವರ ಸೇವೆಯನ್ನು ದಿನಾಂಕ: 01-01-2012 ರಿಂದ ಅನ್ವಯವಾಗುವಂತೆ ಪುನಃ 2 ವರ್ಷಗಳವರೆಗೆ ವಿಸ್ತರಿಸುವುದು ಅತ್ಯವಶ್ಯಕವಾಗಿರುತ್ತದೆ.

1. ಸುಮಾರು 1000ಕ್ಕೂ ಹೆಚ್ಚಿನ ಪಾಲಿನ ಆಸ್ತಿಗಳನ್ನು ಅಳತೆ ಮಾಡಲು ಬಾಕಿ ಇರುತ್ತದೆ ಹಾಗೂ ಆಸ್ತಿವಹಿಗಳಲ್ಲಿ ದಾಖಲಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ.
2. ಹಾಲಿ ಇರುವ 12 ಜನ ನಿವೃತ್ತ ಭೂಮಾಪಕರುಗಳನ್ನು 8 ವಲಯ ಕಛೇರಿಗಳಿಗೆ ತಲಾ ಒಬ್ಬರು ಅಥವಾ ಇಬ್ಬರಂತೆ ನಿಯೋಜಿಸಲಾಗಿದ್ದು, ವಲಯ ಕಛೇರಿಯ ಅಧಿಕಾರಿಗಳು ಇವರ ಸೇವೆಯನ್ನು ಪಾಲಿಕೆ ಆಸ್ತಿಗಳ ಅಳತೆ ಜೊತೆಗೆ ರಾಜಕಾಲುವೆ ಅಳತೆ, ಸ್ಲಂ ಅಳತೆ, ನ್ಯಾಯಾಲಯಕ್ಕೆ ಸಂಬಂಧಿಸಿದ ವಿವಾದಗಳು ಹಾಗೂ ಇತರೆ ಅತ್ಯವಶ್ಯಕವಾದ ತುರ್ತು ಕಾರ್ಯಗಳಿಗೆ ಉಪಯೋಗಿಸಿಕೊಳ್ಳುತ್ತಿರುತ್ತಾರೆ.
3. ಅಳತೆಯಾಗಿರುವ ಆಸ್ತಿಗಳ ಪೈಕಿ ಈಗಾಗಲೇ ಉದ್ಯಾನವನ, ಆಟದ ಮೈದಾನ ಮತ್ತು ಖಾಲಿ ಜಾಗಗಳಿಗೆ ಸಂಬಂಧಿಸಿದಂತೆ ಒಟ್ಟು 1066 ಆಸ್ತಿಗಳನ್ನು ಮೊದಲ ಹಂತವಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ. ಇನ್ನೂ ಇಂತಹ ಸುಮಾರು 550 ಆಸ್ತಿಗಳನ್ನು ಪ್ರಕಟಣೆಗೆ ಕಳುಹಿಸಬೇಕಾಗಿರುತ್ತದೆ. ಕರ್ನಾಟಕ ಉದ್ಯಾನವನ/ಆಟದ ಮೈದಾನ ಮತ್ತು ಖಾಲಿ ಜಾಗಗಳ (ಸಂರಕ್ಷಣೆ ಮತ್ತು ನಿಯಂತ್ರಣ) ಕಾಯ್ದೆ-1985ರ ಅಡಿಯಲ್ಲಿ ಇವುಗಳನ್ನು ಸಾರ್ವಜನಿಕ ಮಾಹಿತಿಗಾಗಿ ಪ್ರಕಟಿಸಬೇಕಾಗಿದೆ.
4. ಹಾಲಿ ಈಗ ಅಳತೆ ಮಾಡಿರುವ ಆಸ್ತಿಗಳನ್ನು ಹಿಂದಿನ ಆಸ್ತಿ ದಾಖಲೆಗಳೊಂದಿಗೆ ಸಮನ್ವಯ ಮಾಡಿ ಕೈಬಿಟ್ಟಿರುವ ಆಸ್ತಿಗಳನ್ನು ಗುರುತಿಸಬೇಕಾಗಿದೆ.
5. ಅಳತೆಯಾಗಿರುವ ಆಸ್ತಿಗಳ ಪೈಕಿ 400 ಆಸ್ತಿಗಳಿಗೆ ಪಿ.ಐ.ಡಿ. ಸಂಸ್ಥೆ ನೀಡಲಾಗಿದ್ದು, ಉಳಿದ ಆಸ್ತಿಗಳಿಗೆ ಮಾಹಿತಿ ಪಡೆದು ಪಿ.ಐ.ಡಿ. ಸಂಸ್ಥೆಯನ್ನು ಆಸ್ತಿಗಳ ವಹಿಗಳಲ್ಲಿ ದಾಖಲಿಸಬೇಕಾಗಿದೆ.
6. ಮೇಲ್ಕಂಡ ಕಾರ್ಯಗಳ ಜೊತೆಗೆ ಮಳೆ ನೀರು ಚರಂಡಿ, ರಸ್ತೆ ಮುಂತಾದ ಜಾಗಗಳಲ್ಲಿ ಒತ್ತುವರಿಗಳನ್ನು ಗುರುತಿಸಿ, ತೆರವುಗೊಳಿಸುವ ಕಾರ್ಯಕ್ಕೆ ಭೂಮಾಪಕರ ಸೇವೆಯು ಅತ್ಯವಶ್ಯಕವಿರುತ್ತದೆ.
7. ಪಾಲಿಕೆ ಆಸ್ತಿಗಳಿಗೆ ಸಂಬಂಧಿಸಿದಂತೆ ಹಲವಾರು ಭೂ-ವಿವಾದಗಳು ನ್ಯಾಯಾಲಯಗಳಲ್ಲಿ ದಾಖಲಾಗಿದ್ದು, ಇವುಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಸಂಗ್ರಹಿಸಿ ನ್ಯಾಯಾಲಯಗಳಿಗೆ ಸಲ್ಲಿಸಲು ನಿವೃತ್ತ ಭೂಮಾಪಕರ ಸೇವೆಯ ಅವಶ್ಯಕವಾಗಿರುತ್ತದೆ.

............................3

8. ಇತ್ತೀಚೆಗೆ ಮಾಹಿತಿ ಕಾಯ್ದೆ ಹಕ್ಕಿನ ಅಡಿಯಲ್ಲಿ ಸಾರ್ವಜನಿಕರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಸ್ತಿಗಳಿಗೆ ಸಂಬಂಧಿಸಿದಂತೆ ಮಾಹಿತಿಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳನ್ನು ನೀಡುತ್ತಿದ್ದು, ಇವುಗಳನ್ನು ತಯಾರಿಸಿ ಕಾಲಮಿತಿಯೊಳಗೆ ಮಾಹಿತಿ ನೀಡಲು ಭೂಮಾಪಕರ ಸೇವೆಯು ಅತ್ಯವಶ್ಯಕವಾಗಿರುತ್ತದೆ.

ಮೇಲೆ ವಿವರಿಸಿರುವ ಹಲವಾರು ಕಾರ್ಯಗಳಿಗೆ ನಿವೃತ್ತ ಭೂ-ಪರ್ಯಾವೇಕ್ಷಕರು/ಭೂಮಾಪಕರ ಸೇವೆಯು ಅತ್ಯವಶ್ಯಕವಾಗಿ ಬೇಕಾಗಿರುವ ಕಾರಣದಿಂದ 24 ಜನ ನಿವೃತ್ತ ಭೂಮಾಪಕರು ಹಾಗೂ 4 ಜನ ಭೂ ಪರ್ಯಾವೇಕ್ಷಕರ ಗುತ್ತಿಗೆ ಸೇವೆಯ ಅವಧಿಯನ್ನು ದಿನಾಂಕ:01-01-2012 ರಿಂದ ಅನ್ವಯವಾಗುವಂತೆ 2 ವರ್ಷಗಳ ಅವಧಿಗೆ ಮುಂದುವರೆಸಿ ಕೆ.ಎಂ.ಸಿ.ಕಾಯ್ದೆ-1976ರ ನಿಯಮ 20(ಎ) ಅನ್ವಯ ಮಾಸಿಕ ಸಂಚಿತ ವೇತನದ ಆಧಾರದ ಮೇಲೆ ಮುಂದುವರೆಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 26-06-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಪರಿಶೀಲಿಸಿ, ಪಾಲಿಕೆಯ ಆಸ್ತಿಗಳನ್ನು ಅಳತೆ ಮಾಡಿ ವಾರ್ಡ್‌ವಾರು ಆಸ್ತಿವಹಿಗಳನ್ನು ತೆರೆದು ಸಂಪೂರ್ಣ ವಿವರಗಳನ್ನು ನಮೂದಿಸಲು ದಿನಾಂಕ:01-01-2012 ರಿಂದ 2 ವರ್ಷಗಳ ಅವಧಿಗೆ 3 ಜನ ನಿವೃತ್ತ ಭೂಪರ್ಯಾವೇಕ್ಷಕರು ಹಾಗೂ 12 ಜನ ನಿವೃತ್ತ ಭೂಮಾಪಕರ ಅವಶ್ಯಕತೆಯಿದ್ದು, ಕಾರ್ಯನಿರ್ವಹಿಸುತ್ತಿದ್ದ ಒಟ್ಟು 15 ಜನರಲ್ಲಿ ಈಗಾಗಲೇ ಚಿಕ್ಕಮಾದಯ್ಯನವರು ದಿನಾಂಕ: 09-05-2012 ರಂದು ಬಿಡುಗಡೆ ಹೊಂದಿರುವುದರಿಂದ ಅಲ್ಲಿಯವರೆವಿಗೂ ಅವರನ್ನು ಮುಂದುವರೆಸಿ ನಂತರ ಅವರನ್ನು ಹೊರತುಪಡಿಸಿ ಉಳಿದವರನ್ನು 2 ವರ್ಷಗಳ ಅವಧಿಗೆ ಕೆ.ಎಂ.ಸಿ. ಕಾಯ್ದೆ-1976ರ ನಿಯಮ 20(ಎ) ಅನ್ವಯ ಮಾಸಿಕ ಸಂಚಿತ ವೇತನದ ಆಧಾರದ ಮೇಲೆ ಮುಂದುವರೆಸಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:06-11-2012ರ ನಿರ್ಣಯ ಹಾಗೂ ದಿನಾಂಕ:22-12-2012ರ ಅವಲೋಕನೆಗೆ ಸಂಬಂಧಿಸಿದಂತೆ ಆಯುಕ್ತರು ದಿನಾಂಕ:08-02-2013 ರಂದು ನೀಡಿರುವ ವಿವರವಾದ ವರದಿಯನ್ನು ಅವಗಾಹಿಸುತ್ತಾ, ಸರ್ಕಾರದ ನಿಯಮಗಳ ಅನುಸಾರ ನಿವೃತ್ತ ಭೂಮಾಪಕರ/ಭೂ-ಪರ್ಯಾವೇಕ್ಷಕರ ವಯೋಮಿತಿಯ ಅನುಗುಣವಾಗಿ ಸದರಿಯವರುಗಳ ಸೇವೆಯನ್ನು ದಿನಾಂಕ:01-01-2012 ರಿಂದ ಜಾರಿಗೆ ಬರುವಂತೆ 2 ವರ್ಷಗಳ ಅವಧಿಗೆ ಮುಂದುವರೆಸಲು ತೀರ್ಮಾನಿಸಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ:25-02-2013ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:11-03-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:11-03-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಹೆಚ್.ಆರ್.ಕೃಷ್ಣಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:11-03-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

## ದಿನಾಂಕ:18-09-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 06 (31)/2013-14

ಬೆಂಗಳೂರು ನಗರದಲ್ಲಿ ಇತ್ತೀಚಿನ ವರ್ಷಗಳಲ್ಲಿ ವಾಹನಗಳ ಬೆಳವಣಿಗೆಯಿಂದ ನಗರದಲ್ಲಿ ವಾಹನಗಳ ಸಂಚಾರ ದಟ್ಟಣೆಯು ಅಧಿಕವಾಗಿರುತ್ತದೆ. ಅನಿಯಂತ್ರಿತ ವಾಹನ ಸಂಖ್ಯೆಗಳ ಏರಿಕೆಯಿಂದ ರಸ್ತೆಗಳಲ್ಲಿ ಪಾರ್ಕಿಂಗ್ ಸಮಸ್ಯೆಯು ಜಟಿಲಗೊಂಡಿರುತ್ತದೆ. ಅಲ್ಲದೆ, ಅಸಂಬದ್ಧ ಪಾರ್ಕಿಂಗ್‌ನಿಂದ ವಾಹನ ಸುಗಮ ಸಂಚಾರಕ್ಕೆ ಅಡಚಣೆಯಾಗುತ್ತಿದೆ. ಈ ಸಮಸ್ಯೆಯ ಬಗ್ಗೆ ಬಿಬಿಎಂಪಿಯ ಕೌನ್ಸಿಲ್ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿ ಮತ್ತು ಸದರಿ ವಿಷಯದ ಕುರಿತು ಸಮರ್ಪಕವಾಗಿ ಪರಿಶೀಲಿಸಿದ ನಂತರ ಕೌನ್ಸಿಲ್ ಸಭೆಯು ಪಾರ್ಕಿಂಗ್ ವ್ಯವಸ್ಥೆಯನ್ನು ಅನುಷ್ಠಾನಗೊಳಿಸುವ ನೀತಿಯನ್ನು ನಿರ್ಣಯ ಸಂಖ್ಯೆ:05(380)/2011-12, ದಿನಾಂಕ:28.03.2012ರಲ್ಲಿ ಅನುಮೋದನೆ ನೀಡಿರುತ್ತದೆ. ಸದರಿ ಪ್ರಸ್ತಾವನೆಗೆ ಕರ್ನಾಟಕ ಸರ್ಕಾರವು ಸರ್ಕಾರಿ ಆದೇಶ ಸಂ: ನಅಇ 911 ಎಂಎನ್‌ವೈ 2013, ದಿನಾಂಕ: 27.03.2013 ರಂದು ಅನುಮೋದನೆ ನೀಡಿರುತ್ತದೆ.

ನಗರ ಭೂಸಾರಿಗೆ ನಿರ್ದೇಶನಾಲಯವು (Directorate of Urban Land Transport) ಬೆಂಗಳೂರು ಮಹಾನಗರದಲ್ಲಿ ಅನುಮೋದಿತ ಪಾರ್ಕಿಂಗ್ ನೀತಿಯನ್ನು ಜಾರಿಗೊಳಿಸುವ ಸಲುವಾಗಿ ಒಂದು ಪಾರ್ಕಿಂಗ್ ಕಾರ್ಯಯೋಜನೆಯನ್ನು ತಯಾರಿಸಿದೆ. ಪ್ರಾಥಮಿಕ ಹಂತದಲ್ಲಿ ನಗರದ ಹೃದಯ/ಸಂಚಾರ ದಟ್ಟಣೆಯ ಪ್ರದೇಶವನ್ನು ಕೇಂದ್ರಿಕರಿಸಿಕೊಂಡು ಅಂದರೆ ಹಲಸೂರು ನಿಂದ ಸಿರ್ಸಿ ವೃತ್ತದವರೆಗೆ (East to West boundary) ಮತ್ತು ಲಾಲ್‌ಬಾಗ್ ಮುಖ್ಯದ್ವಾರದಿಂದ ಅರಮನೆ ವರೆಗಿನ ಭಾಗವನ್ನು (South to North boundary) (ಅನುಬಂಧ-1) ವಾಹನ ನಿಲುಗಡೆಗೆ ಸಂಬಂಧಿಸಿದಂತೆ ವಾಹನ ನಿಲುಗಡೆಗಳ ಬೇಡಿಕೆ ಪೂರೈಕೆ ಜಾಗಗಳ ಸಮೀಕ್ಷೆ ಹಾಗೂ ಮುಂದುವರೆದ ಭವಿಷ್ಯತ್ ಬೇಡಿಕೆಗಳನ್ನು ಅಧ್ಯಯನ ನಡೆಸಲಾಗಿದೆ. ಹಾಲಿ ಲಭ್ಯವಿರುವ ನಿಲುಗಡೆ ಪ್ರದೇಶಗಳನ್ನು ಗರಿಷ್ಠ ಹಾಗೂ ಅತ್ಯುತ್ತಮವಾಗಿ ನಿರ್ವಹಣೆ ಮಾಡುವುದು ಅವಶ್ಯವೆಂದು ಅಧ್ಯಯನವು ಒತ್ತು ನೀಡಿರುತ್ತದೆ. ಆಯ್ದ ಪ್ರದೇಶಗಳಲ್ಲಿ ರಸ್ತೆ ಬದಿ ವಾಹನ ನಿಲುಗಡೆ ಬೇಡಿಕೆಯು ಸದ್ಯ 4800 ಕಾರುಗಳು ಮತ್ತು 10000 ದ್ವಿಚಕ್ರ ವಾಹನಗಳ ಸಂಖ್ಯೆ ಇದ್ದು, ಮುಂದೆ ಈ ಬೇಡಿಕೆಯು ಬಹಳಷ್ಟು ಹೆಚ್ಚಾಗುವ ಸಂಭವವನ್ನು ಅಧ್ಯಯನವು ತಿಳಿಸುತ್ತದೆ. ಎಲ್ಲಾ ಪ್ರಮುಖ ರಸ್ತೆಗಳಲ್ಲಿ ಸುಗಮ ಹಾಗೂ ಸುವ್ಯವಸ್ಥಿತ ನಿಲುಗಡೆಗಾಗಿ ಸವಿವರ ನಿಲುಗಡೆ ಲೇಔಟ್ ನಕ್ಷೆಗಳನ್ನು ತಯಾರಿಸಲಾಗಿದೆ. ನಗರದ ಕೇಂದ್ರ ಭಾಗದ ಸಂಚಾರ ದಟ್ಟಣೆಯ ಪ್ರದೇಶದ ರಸ್ತೆಗಳಲ್ಲಿ ಸದ್ಯ ಸುಮಾರು 2500 ಕಾರುಗಳ ಮತ್ತು 5000 ದ್ವಿಚಕ್ರ ವಾಹನಗಳ ಸಮರ್ಪಕ (On-Street) ನಿಲುಗಡೆ ಸಾಧ್ಯವಿದ್ದು, Off-Street Parking ನಿಂದ ಇನ್ನುಳಿದ ಪಾರ್ಕಿಂಗ್ ಬೇಡಿಕೆಯನ್ನು ಸರಿದೂಗಿಸಬಹುದಾಗಿದೆ.

On-Street ನಿಲುಗಡೆ ಹಾಗೂ Off-Street ವಾಹನ ನಿಲುಗಡೆಗಳನ್ನು ಅನಿರ್ದಿಷ್ಟ ಮಿತಿಗೆ ವಿಸ್ತರಿಸಲು ಸಾಧ್ಯವಿಲ್ಲವೆಂಬುದನ್ನು ಸಹ ಪರಿಗಣಿಸಬೇಕಿದೆ. ಈ ನಿಟ್ಟಿನಲ್ಲಿ ವಾಹನ ನಿಲುಗಡೆಗಳನ್ನು ವಿವಿಧ ನಿಲುಗಡೆ ಅವಧಿಗಳನುಸಾರ ಶುಲ್ಕ ವಿಧಿಸುವುದು ಸೇರಿದಂತೆ ಇನ್ನಿತರೇ ನಿಯಂತ್ರಣ ಮಾರ್ಗಗಳನ್ನು ಅನುಸರಿಸಿ ಲಭ್ಯವಿರುವ ವಾಹನ ನಿಲುಗಡೆ ಜಾಗವನ್ನು ಸಮರ್ಪಕವಾಗಿ ನಿರ್ವಹಣೆ ಸಾಧಿಸುವುದು ಸದ್ಯದ ಪರಿಸ್ಥಿತಿಯಲ್ಲಿ ಅತ್ಯಂತ ಅಗತ್ಯವಾಗಿರುತ್ತದೆ.

ಅಧ್ಯಯನದ ಆಧಾರದ ಮೇಲೆ, ಈ ಕೆಳಗಿನ ಪ್ರಸ್ತಾವನೆಯನ್ನು ನಗರ ಭೂಸಾರಿಗೆ ನಿರ್ದೇಶನಾಲಯವು ಶಿಫಾರಸ್ಸು ಮಾಡಿರುತ್ತದೆ.

..2

## ನಿಲುಗಡೆ ಶುಲ್ಕ (Parking Pricing):

ನಗರದ ವಿವಿಧ ಶ್ರೇಣಿಯ ರಸ್ತೆಗಳಲ್ಲಿ ಶುಲ್ಕ ಸಹಿತ ವಾಹನ ನಿಲುಗಡೆಯ ವಿಚಾರವಾಗಿ ವಾಹನ ಸವಾರರ ಇಂಗಿತವನ್ನು ಅರಿಯಲು ಸಾಧ್ಯತಾ ಅಧ್ಯಯನ (Willingness to pay survey) ನಡೆಸಲಾಗಿದೆ. ಈ ವಿಶ್ಲೇಷಣೆಯಂತೆ ಕಡಿಮೆ ಅವಧಿಯ ವಾಹನ ನಿಲುಗಡೆಯನ್ನು ಪ್ರಮುಖ ರಸ್ತೆಗಳಲ್ಲಿ ಪ್ರೇರೇಪಿಸುವುದನ್ನು ಪರಿಗಣಿಸಿ, ನಗರದ ಹೃದಯ ಭಾಗದಲ್ಲಿನ ಪ್ರದೇಶದ (Core Area) ರಸ್ತೆಗಳನ್ನು ಮೂರು ಪ್ಯಾಕೇಜ್‌ಗಳಲ್ಲಿ ಶ್ರೇಣಿಕರಿಸಿದೆ. (ಅನುಬಂಧ-2ರಲ್ಲಿ ಪ್ಯಾಕೇಜ್‌ವಾರು ಪಟ್ಟಿ ಮಾಡಲಾಗಿದೆ).

ಪ್ಯಾಕೇಜ್ ಎ ರಸ್ತೆಗಳು – ಪ್ರೀಮಿಯಮ್ ಪಾರ್ಕಿಂಗ್ **(Premium Parking)**
ಪ್ಯಾಕೇಜ್ ಬಿ ರಸ್ತೆಗಳು – ವಾಣಿಜ್ಯ ಪಾರ್ಕಿಂಗ್ **(Business Parking)**
ಪ್ಯಾಕೇಜ್ ಸಿ ರಸ್ತೆಗಳು – ಸಾಮಾನ್ಯ ಪಾರ್ಕಿಂಗ್ **(Ordinary Parking)**

| ಕ್ರ ಸಂ | ವಾಹನ ವಿಧ | ಪಾರ್ಕಿಂಗ್ ಶುಲ್ಕ ಪ್ರತಿ ಗಂಟೆಗೆ (ರೂ.ಗಳಲ್ಲಿ) | | |
|---|---|---|---|---|
| | | ಪ್ಯಾಕೇಜ್ ಎ | ಪ್ಯಾಕೇಜ್ ಬಿ | ಪ್ಯಾಕೇಜ್ ಸಿ ಮತ್ತು ಬದಿ ರಸ್ತೆಗಳಲ್ಲಿ ವಾಹನ ನಿಲುಗಡೆ |
| 1 | ಸೈಕಲ್‌ಗಳು | ಉಚಿತ ನಿಲುಗಡೆ | | |
| 2 | ದ್ವಿಚಕ್ರ ವಾಹನಗಳು | 15.00 | 10.00 | 5.00 |
| 3 | ಕಾರುಗಳು | 30.00 | 20.00 | 15.00 |

ಪಾರ್ಕಿಂಗ್ ಶುಲ್ಕವು ನಿಲುಗಡೆ ಅಂಕಣದಲ್ಲಿ ನಿಲುಗಡೆಯಾದ ನಿಖರ ಅವಧಿಗೆ ಮಾತ್ರ ವಿಧಿಸುವುದು. ಉದಾ: ಕಾರೊಂದು 25 ನಿಮಿಷಗಳ ಅವಧಿಗೆ ನಿಲುಗಡೆಯಾದ್ದಲ್ಲಿ ರೂ. 25/- ಮಾತ್ರ ಶುಲ್ಕ ವಿಧಿಸಬೇಕಿದ್ದು, ಮೇಲೆ ನಿಗಧಿಪಡಿಸಿರುವಂತೆ ರೂ. 30/- ಆಗಿರುವುದಿಲ್ಲ. ಆದಾಗ್ಯೂ 15 ನಿಮಿಷಗಳು/ ಅದಕ್ಕೂ ಕಡಿಮೆ ಅವಧಿಗೆ ಕನಿಷ್ಟ ನಿಲುಗಡೆ ಶುಲ್ಕ ರೂ. 15/-ನ್ನು ಪಾವತಿಸಬೇಕಾಗುವುದು. ಪಾರ್ಕಿಂಗ್ ಶುಲ್ಕಗಳು ಪಾರ್ಕಿಂಗ್ ನೀತಿಯ ಅನುಸಾರ ದಿನದ ದಟ್ಟಣೆ ಅವಧಿ/ ಉಳಿದ ಸಾಮಾನ್ಯ ಅವಧಿಗಳಲ್ಲಿ ಹಾಗೂ ರಜಾದಿನ/ಸಾಮಾನ್ಯ ದಿನಗಳು ಒಂದೇ ರೀತಿಯಲ್ಲಿರುತ್ತದೆ. ಶಾಲಾ ವಾಹನಗಳು, ಮಿನಿ ಬಸ್‌ಗಳನ್ನು ಕಾರ್‌ನ 1.5 ಗುಣಾಂಕಗಳಲ್ಲಿ ಪರಿಗಣಿಸಿ ಅದರಂತೆ, ಪಾರ್ಕಿಂಗ್ ಶುಲ್ಕವನ್ನು ಲೆಕ್ಕ ಮಾಡಬೇಕಾಗುತ್ತದೆ. ನಗರದ ಹೃದಯ/ ಸಂಚಾರ ದಟ್ಟಣೆಯ ಪ್ರದೇಶದ ರಸೆಗಳಲ್ಲಿ ಖಾಸಗಿ ಟ್ರಕ್‌ಗಳು ಮತ್ತು ಬಸ್‌ಗಳ ನಿಲುಗಡೆಗೆ ಅವಕಾಶವಿರುವುದಿಲ್ಲ. ಅನಿವಾರ್ಯ ನಿಲುಗಡೆ ಮಾಡಬೇಕಾದ್ದಲ್ಲಿ ಕಾರ್‌ಗಳ ಮೂರರಷ್ಟು ಶುಲ್ಕವನ್ನು ವಿಧಿಸಬೇಕಿದೆ. (ಸರ್ಕಾರಿ, ಪಾಲಿಕೆ, ಬಿಎಂಟಿಸಿ ಮತ್ತು ಕೆಎಸ್‌ಆರ್‌ಟಿಸಿ ಬಸ್‌ಗಳಿಗೆ ಪಾರ್ಕಿಂಗ್ ಶುಲ್ಕದ ವಿನಾಯಿತಿ ಇದೆ).

ಅದೇ ರೀತಿ ಪಾರ್ಕಿಂಗ್ ಶುಲ್ಕವನ್ನು ವಾರ್ಷಿಕವಾರು ಏರಿಕೆ ಮಾಡಲು ಉದ್ದೇಶಿಸಲಾಗಿದ್ದು, ಇದು ಸಗಟು ಬೆಲೆ ಸೂಚ್ಯಂಕವನ್ನು (Whole sale price Index) ಅನ್ನು ಅವಲಂಬಿಸಿದೆ. ಇದಕ್ಕಾಗಿ ಒಂದು Standrard Formula ನಿಗಧಿಪಡಿಸಿದೆ.

**ಹೊಸ ಪಾರ್ಕಿಂಗ್ ದರ = ಹಳೇ ಪಾರ್ಕಿಂಗ್ ದರ X [1+ ಸಗಟು ಬೆಲೆ ಸೂಚ್ಯಂಕ ಬೆಳವಣಿಗೆ ದರ]**

## ವಾಹನ ನಿಲುಗಡೆ ಮಾಹಿತಿ ವ್ಯವಸ್ಥೆ (Parking Information System)

ಬೆಂಗಳೂರಿನಲ್ಲಿ ವಾಹನ ನಿಲುಗಡೆ ವ್ಯವಸ್ಥೆಯನ್ನು ಆಧುನಿಕವಾಗಿ ನಿರ್ವಹಿಸಲು ಯೋಜಿಸಲಾಗಿದ್ದು, ವಾಹನ ನಿಲುಗಡೆ ಸ್ಥಳಗಳಲ್ಲಿ ಅತ್ಯಾಧುನಿಕ ತಂತ್ರಜ್ಞಾನದ ಶುಲ್ಕ ಮೀಟರ್‌ಗಳನ್ನು ಅಳವಡಿಸಲಾಗುತ್ತಿದ್ದು (ಸ್ವೈಪ್ ಕಾರ್ಡ್, ಮೊಬೈಲ್ ಅಪ್ಲಿಕೇಶನ್ಸ್‌ಗಳು, ಆರ್.ಎಫ್.ಐ.ಡಿ. ವಾಹನ ಪರಿಕರಗಳು), ನಿಲುಗಡೆ ಬೇಗಳಲ್ಲಿ ಅವಶ್ಯಕ ರಸ್ತೆ ಮಾರ್ಗಸೂಚಿಗಳನ್ನು ಅಳವಡಿಸಲು ಯೋಜಿಸಿದೆ. ದಿನದ 24/7 ಕಾರ್ಯನಿರ್ವಹಿಸುವ ನಿಲುಗಡೆ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಎಲ್ಲಾ ರಸ್ತೆ ಬದಿ ನಿಲುಗಡೆ (On-Street) ಹಾಗೂ ಬದಿ ರಸ್ತೆಗಳ (Off-Street) ವಾಹನ ನಿಲುಗಡೆ ವ್ಯವಸ್ಥೆ ರಸ್ತೆಗಳನ್ನು ಸಮ್ಮಿಳಿತ ಸಂಪರ್ಕದೊಂದಿಗೆ, ಕೇಂದ್ರಿಕೃತ ನಿಯಂತ್ರಣ

ವ್ಯವಸ್ಥೆಯೊಂದಿಗೆ ನಿರ್ವಹಣೆ ಮಾಡಲು ಯೋಜಿಸಲಾಗಿದೆ. ಸದರಿ ನಿಯಂತ್ರಿತ ಕೇಂದ್ರವು ಎಲ್ಲಾ ವಾಹನ ನಿಲುಗಡೆಗಳ ಲಭ್ಯತೆ ಮತ್ತು ಹತ್ತಿರದ ವಾಹನ ನಿಲುಗಡೆಯ ಕ್ಷಣ ಕ್ಷಣದ ಮಾಹಿತಿಗಳನ್ನು ವಿವಿಧ ರಸ್ತೆಗಳಲ್ಲಿ ಡಿಜಿಟಲ್ ಡಿಸ್‌ಪ್ಲೇ ಮುಖೇನ ವಾಹನ ಸವಾರರಿಗೆ/ ಸಾರ್ವಜನಿಕರಿಗೆ ತಿಳಿಸುವ ವ್ಯವಸ್ಥೆ ಒದಗಿಸಲು ಯೋಜಿಸಲಾಗಿದೆ. ಪಾರ್ಕಿಂಗ್ ಅಂಕಣಗಳಲ್ಲಿ Surveillance ಕ್ಯಾಮೆರಾಗಳನ್ನು ಅಳವಡಿಸಿ, ಅಲ್ಲಿನ ಎಲ್ಲಾ ಚಟುವಟಿಕೆಗಳ ಮೇಲೆ ನಿಗಾವಹಿಸಲು ಕೇಂದ್ರಿಕೃತ ಮಾಹಿತಿ/ ನಿಯಂತ್ರಣ ವ್ಯವಸ್ಥೆ ಸಹ ಮಾಡಲು ಯೋಜಿಸಲಾಗಿದೆ.

**ಬಿಜಿನೆಸ್ ಮಾಡೆಲ್ (Business Model):**

ನಗರದ ಹೃದಯ/ ಸಂಚಾರ ದಟ್ಟಣೆಯ ಪ್ರದೇಶದ ರಸ್ತೆ ಬದಿ ನಿಲುಗಡೆಯ ಕೇಂದ್ರಿಕೃತ ನಿಯಂತ್ರಣ ವ್ಯವಸ್ಥೆಯೊಂದಿಗೆ ಯೋಜನೆ ಜಾರಿಗೊಳಿಸಲು ಸುಮಾರು ರೂ. 40.00 ಕೋಟಿಗಳ ವೆಚ್ಚವನ್ನು ಅಂದಾಜಿಸಲಾಗಿದೆ. ಈ ಯೋಜನೆಯ ಅನುಷ್ಠಾನ ಮತ್ತು ಪಾಲನೆ (Operation & Maintainence) ವೆಚ್ಚವು ಸುಮಾರು ವಾರ್ಷಿಕವಾಗಿ ರೂ. 8.50 ಕೋಟಿಗಳಾಗುತ್ತಿದ್ದು, ಮೇಲಿನಂತೆ ನಿಲುಗಡೆ ಶುಲ್ಕ ವಿಧಿಸುವುದರಿಂದ ಕೋರ್ ಪ್ರದೇಶವೊಂದರಲ್ಲೇ ಸುಮಾರು ರೂ. 80.00 ಕೋಟಿಗಳ ಆದಾಯ ನಿರೀಕ್ಷಿಸಲಾಗಿದೆ. ಇದನ್ನು ವೃತ್ತಿಪರವಾಗಿ ನಿರ್ವಹಣೆ ಮಾಡಲು ಒಟ್ಟಾರೆ ನಿಲುಗಡೆ ವ್ಯವಸ್ಥೆಯನ್ನು ವಿನ್ಯಾಸಗೊಳಿಸುವುದು, ರಸ್ತೆ ಬದಿ ನಿಲುಗಡೆ ಅಂಕಣಗಳನ್ನು ಅಭಿವೃದ್ಧಿಪಡಿಸುವುದು, ಮೀಟರ್ ಅಳವಡಿಕೆ, ರಸ್ತೆ ಸೂಚಿ ಅಳವಡಿಕೆ, ಕಣ್ಗಾವಲು ವ್ಯವಸ್ಥೆ ಹಾಗೂ ನಿಯಮಿತ ಕಾರ್ಯ ಮತ್ತು ಪಾಲನೆಗಳು ಸೇರಿದಂತೆ ಸಮಗ್ರ ಕಾರ್ಯವನ್ನು ಒಂದೇ ಪ್ಯಾಕೇಜ್ ಅಡಿಯಲ್ಲಿ ವರಮಾನ ಹಂಚಿಕೆ (Revenue-Sharing Arrangment) ವ್ಯವಸ್ಥೆಯೊಂದಿಗೆ (ವಾಹನ ನಿಲುಗಡೆಯ ವರಮಾನದ ಶೇಕಡವಾರನ್ನು ಬಿಡ್ ಮಾಪನವಾಗಿ ಪರಿಗಣಿಸಿ) ನಿಗಧಿತ 5 ವರ್ಷಗಳ ಅವಧಿಗೆ ಟೆಂಡರ್ ಕರೆದು ನಿರ್ವಹಿಸಲು ಶಿಫಾರಸ್ಸು ಮಾಡಲಾಗಿದೆ. ಪಾಲಿಕೆಯು ಈ ಯೋಜನೆಗೆ ಯಾವುದೇ ಹಣ ಹೂಡಿಕೆ ಮಾಡಬೇಕಾಗಿರುವುದಿಲ್ಲ. ಪ್ರಸ್ತಾಪಿತ ಶುಲ್ಕ ಸಂಗ್ರಹಣಾ ವ್ಯವಸ್ಥೆಯು ಸಂಪೂರ್ಣ ಸ್ವಯಂಚಾಲಿತ (Fully Automatic) ವಿದ್ದು, ಲಭ್ಯವಾಗುವ ವಾಹನ ನಿಲುಗಡೆ ವರಮಾನವನ್ನು ಕಡಿಮೆಯಾಗಿ ಅಂದಾಜಿಸುವುದು ಅಥವಾ ತಿದ್ದುವುದು (Tampering) ಮಾಡಲು ಸಾಧ್ಯವಿರುವುದಿಲ್ಲ.

**ವ್ಯವಸ್ಥೆಯ ಬ್ರ್ಯಾಂಡಿಂಗ್ (Branding of the System):**

ಈ ನಿಲುಗಡೆ ನಿರ್ವಹಣಾ ಯೋಜನೆಯನ್ನು Bangalore initiative for Parking (Bip [ಬಿಪ್]) ಎಂದು Brand ಮಾಡಲು ಯೋಜಿಸಿದೆ.

**ವ್ಯವಸ್ಥೆಯ ವಿಸ್ತರಣೆ (Extension of the System):**

ನಗರದ ಕೋರ್ ಪ್ರದೇಶದ ಈ ವಾಹನ ನಿಲುಗಡೆ ವ್ಯವಸ್ಥೆಯನ್ನು ನಗರದ ಉಳಿದ ಭಾಗಗಳಿಗೂ ಯೋಜನೆಯ ಯಶಸ್ಸಿನ ನಂತರ ಹಂತ ಹಂತಗಳಲ್ಲಿ ವಿಸ್ತರಿಸಲು ಪ್ರಸ್ತಾಪಿಸಲಾಗಿದೆ.

ಈ ಹಿನ್ನೆಲೆಯಲ್ಲಿ, ಮೇಲೆ ವಿವರಿಸಿರುವಂತೆ ಕೋರ್ ಪ್ರದೇಶದ ರಸ್ತೆಗಳಲ್ಲಿ ವಾಹನ ನಿಲುಗಡೆ ನಿರ್ವಹಣಾ ವ್ಯವಸ್ಥೆ ಜಾರಿ ಮಾಡಲು (Parking Management System) ಹಾಗೂ ಹಂತ ಹಂತವಾಗಿ ನಗರದ ಉಳಿದ ಭಾಗಗಳಿಗೂ ಸದರಿ ವ್ಯವಸ್ಥೆಯನ್ನು ವಿಸ್ತರಿಸುವ ಬಗ್ಗೆ ಅನುಮೋದನೆಯನ್ನು ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:20-08-2013 ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:20-08-2013ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ. ಹೆಚ್.ಆರ್.ಕೃಷ್ಣಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಆಯುಕ್ತರವರ ದಿನಾಂಕ:20-08-2013ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

## ದಿನಾಂಕ:18-09-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 08 (19)/2013-14

ಟಿಪ್ಪಣಿಯಲ್ಲಿ ವಿವರಿಸುವಂತೆ, 1ನೇ ಮುಖ್ಯರಸ್ತೆ, ಸಂಪಂಗಿರಾಮನಗರದಲ್ಲಿ ಇರುವ ಮಹಾನಗರ ಪಾಲಿಕೆ ಸೈಟ್ ನಂ.77, 78, 79 ಮತ್ತು 80ರ 40'x51'.6"=2060 ಚ.ಅಡಿಗಳ ವಿಸ್ತೀರ್ಣವುಳ್ಳ ಜಾಗವನ್ನು ಶ್ರೀ. ಕೋದಂಡರಾಮ ಭಜನ ಮಂಡಳಿಗೆ ಕಲ್ಯಾಣ ಮಂಟಪವನ್ನು ಕಟ್ಟಿಕೊಳ್ಳಲು 30 ವರ್ಷಗಳ ಅವಧಿಗೆ ವಾರ್ಷಿಕ ರೂ.1000/- ನಿಗಧಿಪಡಿಸಿ, ದಿನಾಂಕ:20-05-1977 ರಲ್ಲಿ ಗುತ್ತಿಗೆಗೆ ನೀಡಿದ್ದು, ಈ ಅವಧಿಯು ಮೇ 2007ಕ್ಕೆ ಮುಕ್ತಾಯವಾಗಿರುತ್ತದೆ.

ಶ್ರೀ. ಕೋದಂಡರಾಮ ಭಜನ ಮಂಡಳಿ ದೇವಸ್ಥಾನದ ಕಾರ್ಯದರ್ಶಿಯವರು ಅರ್ಜಿಯನ್ನು ಸಲ್ಲಿಸಿ, ಅರ್ಜಿಯ ಜೊತೆಯಲ್ಲಿ ಈ ಹಿಂದೆ ನೀಡಲಾದ ಲೀಸ್ ಅಮೌಂಟ್ ಪ್ರತಿಯನ್ನು ಹಾಗೂ ಲೀಸ್ ಹಣವನ್ನು ಕಟ್ಟಿರುವ ರಸೀದಿ 2011-12ನೇ ಸಾಲಿಗೆ ಕಂದಾಯ ಪಾವತಿ ಮಾಡಿರುವ ರಸೀದಿಗಳನ್ನು ಹಾಜರುಪಡಿಸಿ ಪುನರ್ 30 ವರ್ಷಗಳ ಅವಧಿಗೆ ಗುತ್ತಿಗೆ ಅವಧಿಯನ್ನು ವಿಸ್ತರಿಸಬೇಕೆಂದು ಕೋರಿರುತ್ತಾರೆ.

ವಲಯಾಧಿಕಾರಿಗಳು ನೀಡಿರುವ ವರದಿಯಲ್ಲಿ ನಿಗಧಿಪಡಿಸಿರುವ ಗುತ್ತಿಗೆ ಹಣ ವಾರ್ಷಿಕ ರೂ.1000/-ಗಳನ್ನು ಯಾವುದೇ ಬಾಕಿ ಇಲ್ಲದೆ ಪಾವತಿ ಮಾಡಿರುವುದಾಗಿ ಹಾಗೂ ಸದರಿ ಸ್ವತ್ತಿಗೆ ಕಂದಾಯವನ್ನು ನಿಗಧಿಪಡಿಸಿಕೊಂಡು ವರ್ಷ ವರ್ಷಕ್ಕೆ ಕಂದಾಯವನ್ನು ಸಹ 2011-12ರ ವರ್ಷಕ್ಕೆ ಪೂರ್ತಿಯಾಗಿ ಪಾವತಿ ಮಾಡಿರುವುದಾಗಿ ವರದಿ ಮಾಡಿರುತ್ತಾರೆ.

ಸ್ಥಳ ಪರಿಶೀಲಿಸಲಾಗಿ, ಸದರಿ ಜಾಗದಲ್ಲಿ ಕಲ್ಯಾಣ ಮಂಟಪ ಮತ್ತು ಶ್ರೀ. ಕೋದಂಡರಾಮ ಭಜನ ದೇವಾಸ್ಥಾನವನ್ನು ಕಟ್ಟಿ ಕೆಳವರ್ಗ, ಮಧ್ಯಮವರ್ಗದವರು ಹೆಚ್ಚಾಗಿರುವ ಸಂಪಂಗಿರಾಮನಗರ ನಿವಾಸಿಗಳಿಗೆ ಹೆಚ್ಚು ಅನುಕೂಲವಾಗುವಂತೆ ಸ್ಪಂದಿಸುತ್ತಿರುತ್ತಾರೆ. ಆಂಗಿದಾಗ್ಗೆ ಲೋಕ ಕಲ್ಯಾಣಕೋಸ್ಕರ ದೇವರ ಉತ್ಸವಗಳನ್ನು ಹಾಗೂ ಹೋಮಗಳು, ಉಚಿತ ಮದುವೆಗಳು, ಬಡವಿದ್ಯಾರ್ಥಿಗಳಿಗೆ ಉಚಿತವಾಗಿ ಪುಸ್ತಕಗಳನ್ನು ವಿತರಣೆ ಮಾಡುವುದು ಮುಂತಾದ ಧರ್ಮಕಾರ್ಯಗಳು ನಡೆಯುತ್ತಿರುತ್ತವೆ.

ಸದರಿ ಸ್ವತ್ತಿನ ಮಾರುಕಟ್ಟೆ ದರವು ದಿನಾಂಕ;21-09-2011ರ ಸರ್ಕಾರದ ಮಾರ್ಗಸೂಚಿ ದರಗಳಂತೆ ಚದರಡಿ 1ಕ್ಕೆ ರೂ.2500/- ಗಳಾಗಿದ್ದು, ವಾಣಿಜ್ಯಕ್ಕೆ ಶೇ.40% ಹೆಚ್ಚಿಸಿದಲ್ಲಿ ಚದರಡಿ 1ಕ್ಕೆ ರೂ.3500/-ಗಳಾಗುತ್ತದೆ. ಇದರಂತೆ, ಸ್ವತ್ತಿನ ಮೌಲ್ಯ 2060 ಚ.ಅಡಿಗಳಿಗೆ 2060x3500=ರೂ.72,10,000/- ಗಳಾಗುತ್ತದೆ. ದಿನಾಂಕ:01-03-2002ರ ಮಾರ್ಗಸೂಚಿಯನ್ವಯ ಸ್ವತ್ತಿನ ಒಟ್ಟು ಮೌಲ್ಯದ ಶೇ.10% ರಷ್ಟು ಪರಿಗಣಿಸಿದಾಗ ವಾರ್ಷಿಕ ಗುತ್ತಿಗೆ ಹಣವು ರೂ.7,21,000/- ಗಳು ಹಾಗೂ ಮಾಸಿಕ ರೂ.60,084/- ಗಳಾಗುತ್ತದೆ.

ದಿನಾಂಕ:01-03-2002ರ ಆಯುಕ್ತರ ಸುತ್ತೋಲೆ ಮಾರ್ಗಸೂಚಿ ಕ್ರಮ ಸಂಖ್ಯೆ:7(5) ರಂತೆ ಶೇ.100% ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದಾಯಿ ಸಂಸ್ಥೆಗಳಿಗೆ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ/ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವರು ಎಂದು ಸ್ಪಷ್ಟೀಕರಿಸಲಾಗಿದೆ.

ಆದ್ದರಿಂದ, ಶ್ರೀ.ಕೋದಂಡರಾಮ ಭಜನ ಮಂಡಳಿಯವರಿಗೆ ಗುತ್ತಿಗೆ ಅವಧಿ ಮುಗಿದ ದಿನಾಂಕದಿಂದ 20-05-2007 ರಿಂದ 19-05-2037 ರವರೆಗೆ ಗುತ್ತಿಗೆ ದರ ನಿಗಧಿಪಡಿಸಿ ನವೀಕರಿಸುವ ಬಗ್ಗೆ ಸ್ಥಾಯಿ ಸಮಿತಿಗಳ ಮುಖಾಂತರ ಪಾಲಿಕೆ ಸಭೆಯ ನಿರ್ಣಯದೊಂದಿಗೆ ಸರ್ಕಾರದ ಅನುಮೋದನೆ ಕೋರಬಹುದಾಗಿದ್ದು, ಅನುಮೋದನೆ ಕೋರಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ

............................2

ಆಯುಕ್ತರವರ ದಿನಾಂಕ:27-01-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:19-02-2013ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:11-03-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:11-03-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಹೆಚ್.ಆರ್.ಕೃಷ್ಣಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:11-03-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:18-09-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 09 (26)/2013-14

ಟಿಪ್ಪಣಿಯಲ್ಲಿ ವಿವರಿಸುವಂತೆ, ವಿಭಾಗೀಯ ರೈಲ್ವೇ ಮ್ಯಾನೇಜರ್, ಬೆಂಗಳೂರು ರವರು ದಿನಾಂಕ: 21-11-2012 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ರವರಿಗೆ ಪತ್ರ ಬರೆದು ಬಿನ್ನಿಮಿಲ್ ಜಾಗದಲ್ಲಿನ ರೈಲ್ವೆ ಇಲಾಖೆಯ ವಿಸ್ತೀರ್ಣ ಕಾರ್ಯಕ್ಕೆ ತುರ್ತು ವಿಧಿ ಬಳಸಿ ಭೂಸ್ವಾಧೀನಪಡಿಸುವಂತೆ ಕೋರಿದ್ದ ಹಿನ್ನಲೆಯಲ್ಲಿ, ಕಂದಾಯ ಇಲಾಖೆ ಕಛೇರಿಯಿಂದ ಕರ್ನಾಟಕ ಸರ್ಕಾರದ ಸಚಿವಾಲಯದ ದಿನಾಂಕ:24-11-2012ರ ಪತ್ರದಲ್ಲಿ ಪಾಲಿಕೆಗೆ ಪತ್ರ ಬರೆದು ಸದರಿ ವಿಷಯವಾಗಿ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಿರುತ್ತಾರೆ. ಅದರಂತೆ ಉಪ ಆಯುಕ್ತರು (ಭೂಸ್ವಾಧೀನ) ರವರು ಸಂಖ್ಯೆ:ಎಲ್.ಎ.ಕ್ಯೂ/ಪಿ.ಆರ್/02/2012-13 ದಿನಾಂಕ:06-12-2012 ರಂದು ಪತ್ರ ಬರೆದು ಬಿನ್ನಿಮಿಲ್ ಜಾಗದಲ್ಲಿನ ಜಮೀನನ್ನು ರೈಲ್ವೆ ಇಲಾಖೆಯ ವಿಸ್ತೀರ್ಣ ಕಾರ್ಯಕ್ಕೆ ತುರ್ತು ವಿಧಿ ಬಳಸಿ ಭೂಸ್ವಾಧೀನಪಡಿಸಿಕೊಳ್ಳಲು ಸಂಬಂಧಿಸಿದ ದಾಖಲೆಗಳೊಂದಿಗೆ ಕಡತವನ್ನು ಸಲ್ಲಿಸಲು ಕೋರಿರುತ್ತಾರೆ.

ಬೆಂಗಳೂರಿನ ಓಕಳಿಪುರಂ ಜಂಕ್ಷನ್‌ನಿಂದ ಫೌಂಟೇನ್ ವೃತ್ತದವರೆಗೆ ಹೊಸ ಕಾರಿಡಾರ್ ನಿರ್ಮಾಣ ಮಾಡಿ ಕೇಂದ್ರ ಸ್ಥಾನದಲ್ಲಿ ಸಿಗ್ನಲ್ ರಹಿತ ಜಂಕ್ಷನ್ ನಿರ್ಮಾಣ ಮಾಡಲು ಉದ್ದೇಶಿಸಿದ್ದು, ರೈಲ್ವೆ ಇಲಾಖೆಯ ಸುಮಾರು 12818.00 ಚ.ಮೀ. ಜಾಗವನ್ನು Land Exchange ಆಧಾರದ ಮೇಲೆ ಪಡೆದು ಈ ಯೋಜನೆಯನ್ನು ಕೈಗೆತ್ತಿಕೊಳ್ಳಲು ಸಿದ್ಧಪಡಿಸಲಾಗಿತ್ತು. ಅದರಂತೆ, ಸರ್ಕಾರದ ಅನುಮೋದನೆಯನ್ನು ಕೋರಲಾಗಿತ್ತು. ದಿನಾಂಕ:02-02-2011 ಸಂಖ್ಯೆ:ನಅಇ 547 ಎಂಎನ್‌ವೈ 2010 ರಲ್ಲಿ ಸರ್ಕಾರವು ಯೋಜನೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದ್ದು, ಸದರಿ ಸರ್ಕಾರಿ ಆದೇಶದಲ್ಲಿ ತಿಳಿಸಿದಂತೆ Land Exchange ಆಧಾರದಂತೆ ವಿಭಾಗೀಯ ರೈಲ್ವೆ ಮ್ಯಾನೇಜರ್, ಬೆಂಗಳೂರು ರವರು ದಿನಾಂಕ:21-11-2012 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ರವರಿಗೆ ಪತ್ರ ಬರೆದು ಬಿನ್ನಿಮಿಲ್ ಜಾಗದಲ್ಲಿನ ಜಮೀನನ್ನು ರೈಲ್ವೆ ಇಲಾಖೆಯ ವಿಸ್ತೀರ್ಣ ಕಾರ್ಯಕ್ಕೆ ತುರ್ತು ವಿಧಿ ಬಳಸಿ ಭೂಸ್ವಾಧೀನಪಡಿಸುವಂತೆ ಕೋರಿದ್ದ ಹಿನ್ನಲೆಯಲ್ಲಿ ಘನ ಸರ್ಕಾರದವರು ಕರ್ನಾಟಕ ಸರ್ಕಾರವು ದಿನಾಂಕ:24-11-2012ರ ಪತ್ರದನ್ವಯ ಪಾಲಿಕೆಗೆ ಪತ್ರ ಬರೆದು ಸದರಿ ವಿಷಯವಾಗಿ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಿರುತ್ತಾರೆ. ಉಪ ಆಯುಕ್ತರು (ಭೂಸ್ವಾಧೀನ) ರವರು ದಿನಾಂಕ:06-12-2012 ರಂದು ಪತ್ರ ಬರೆದು ಬಿನ್ನಿಮಿಲ್ ಜಾಗದಲ್ಲಿನ ಜಮೀನನ್ನು ರೈಲ್ವೆ ಇಲಾಖೆಯ ವಿಸ್ತೀರ್ಣ ಕಾರ್ಯಕ್ಕೆ ತುರ್ತು ವಿಧಿ ಬಳಸಿ ಭೂಸ್ವಾಧೀನಪಡಿಸಿಕೊಳ್ಳಲು ಸಂಬಂಧಿಸಿದ ದಾಖಲೆಗಳೊಂದಿಗೆ ಕಡತವನ್ನು ಸಲ್ಲಿಸಲು ಕೋರಿರುತ್ತಾರೆ.

ಮುಂದುವರೆದಂತೆ, ಮಾನ್ಯ ಶ್ರೀ. ಎಸ್.ಸುರೇಶ್ ಕುಮಾರ್, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು, ಬೆಂಗಳೂರು ರವರ ಪತ್ರ ಸಂಖ್ಯೆ:ನಕಾಸಂ/2203/2012-13, ದಿನಾಂಕ:03-12-2012 ರಂದು ಮಾನ್ಯ ಆಯುಕ್ತರವರಿಗೆ ಪತ್ರ ಬರೆದು ಬೆಂಗಳೂರು ನಗರದ ಪಶ್ಚಿಮ ಭಾಗದಿಂದ ಬೆಂಗಳೂರು ಕೇಂದ್ರ ಭಾಗಕ್ಕೆ ಬರುವ ವಾಹನಗಳಿಗೆ ಎದುರಾಗುವ ಪ್ರಮುಖ ಸಂಚಾರ ಸಮಸ್ಯೆಯನ್ನು ನಿವಾರಿಸುವ ಸಲುವಾಗಿ ಓಕಳಿಪುರಂ ತಡೆರಹಿತ ಸಿಗ್ನಲ್ ಕಾರಿಡಾರ್ ಅನ್ನು ನಿರ್ಮಾಣ ಮಾಡಲು ಈಗಾಗಲೇ ಸರ್ಕಾರದ ಅನುಮೋದನೆ ದೊರೆತಿದ್ದು ಮೆ॥ ಸಿಂಪ್ಲೆಕ್ಸ್ ಇನ್‌ಫ್ರಾಸ್ಟ್ರಕ್ಚರ್ ಲಿ. ಸಂಸ್ಥೆಗೆ ಆದೇಶ ನೀಡಿರುವುದರಿಂದ ಸಾರ್ವಜನಿಕರ ಹಿತದೃಷ್ಟಿಯಿಂದ ಓಕಳಿಪುರಂ ತಡೆರಹಿತ ಸಿಗ್ನಲ್ ಕಾರಿಡಾರ್ ಕಾಮಗಾರಿಯನ್ನು ಪ್ರಾರಂಭ ಮಾಡಲು ಮಾನ್ಯ ಮುಖ್ಯಮಂತ್ರಿಗಳು ದಿನಾಂಕ:20-12-2012 ರಂದು ಈ ಯೋಜನೆಯ ಭೂಮಿ ಪೂಜೆ ಮಾಡಲು ಒಪ್ಪಿಗೆಯನ್ನು ನೀಡಿದ್ದು ಹಾಗೂ ಈ ದಿನದಂದು ನಡೆಯಲಿರುವ ಭೂಮಿ ಪೂಜೆ ಕಾರ್ಯಕ್ರಮಕ್ಕಾಗಿ ಎಲ್ಲಾ ಸಿದ್ಧತೆಯನ್ನು ಕೈಗೊಳ್ಳಲು ತಿಳಿಸಿದ್ದು, ಈಗಾಗಲೇ ಪಾಲಿಕೆವತಿಯಿಂದ ಭೂಮಿ ಪೂಜೆ ಕಾರ್ಯಕ್ರಮ ಮಾಡಲು ಸಿದ್ಧತೆಯನ್ನು ಮಾಡಿಕೊಳ್ಳಲಾಗುತ್ತಿದೆ.

..........2

ಸದರಿ ಯೋಜನೆಯ ಬಗ್ಗೆ ನೈರುತ್ಯ ರೈಲ್ವೆ ಇಲಾಖೆಯೊಂದಿಗೆ Land sharing ಬಗ್ಗೆ M.O.U ಮಾಡಿಕೊಳ್ಳಬೇಕಾಗಿದ್ದು, ಈ ಬಗ್ಗೆ ಈಗಾಗಲೇ ಕರಡು M.O.U ವನ್ನು ಕಳುಹಿಸಲು ಕೋರಿ ನೈರುತ್ಯ ರೈಲ್ವೆ ಇಲಾಖೆಗೆ ಪತ್ರ ಬರೆಯಲಾಗಿರುತ್ತದೆ. ಈ ಸಂದರ್ಭದಲ್ಲಿ ವಿಭಾಗೀಯ ರೈಲ್ವೆ ಮ್ಯಾನೇಜರ್ (ನೈರುತ್ಯ ರೈಲ್ವೆ) ಇಲಾಖೆಯವರು ಈ ಕಾರಿಡಾರ್ ಯೋಜನೆಗಾಗಿ ನೀಡುತ್ತಿರುವ 12818.00 ಚ.ಮೀ. ರೈಲ್ವೆ ಜಾಗದ ಬದಲಿಗಾಗಿ ಬಿನ್ನಿಮಿಲ್ ಜಾಗದಲ್ಲಿನ 12818.00 ಚ.ಮೀ. ಜಮೀನನ್ನು ರೈಲ್ವೆ ನಿಲ್ದಾಣ ವಿಸ್ತೀರ್ಣ ಕಾರ್ಯಕ್ಕೆ ನೀಡಲು ಕೋರಿ ದಿನಾಂಕ:21-11-2012 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ರವರಿಗೆ ಪತ್ರ ಬರೆದು ಬಿನ್ನಿಮಿಲ್ ಜಾಗದಲ್ಲಿನ ಜಮೀನನ್ನು ರೈಲ್ವೆ ಇಲಾಖೆಯ ವಿಸ್ತೀರ್ಣ ಕಾರ್ಯಕ್ಕೆ ತುರ್ತು ವಿಧಿ ಬಳಸಿ ಭೂಸ್ವಾಧೀನಪಡಿಸುವಂತೆ ಕೋರಲಾಗಿದ್ದ ಹಿನ್ನಲೆಯಲ್ಲಿ, ತಮ್ಮ ಕಛೇರಿಯಿಂದ ಕರ್ನಾಟಕ ಸರ್ಕಾರ ಸಚಿವಾಲಯದ ಪತ್ರ ಸಂ.ಕಂಇ 68 ಭೂಸ್ವಾಬೆ 2012, ದಿನಾಂಕ:24-11-2012 ರನ್ವಯ ಆಯುಕ್ತರು, ಪಾಲಿಕೆಗೆ ಪತ್ರ ಬರೆದು ಸದರಿ ವಿಷಯವಾಗಿ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಿರುತ್ತಾರೆ. ಅದರಂತೆ ಉಪ ಆಯುಕ್ತರು (ಭೂಸ್ವಾಧೀನ) ರವರು ಸಂಖ್ಯೆ:ಎಲ್.ಎ.ಕ್ಯೂ/ಪಿ.ಆರ್/02/2012-13, ದಿನಾಂಕ:06-12-2012 ರಂದು ಈ ಕಛೇರಿಗೆ ಪತ್ರ ಬರೆದು ಬಿನ್ನಿಮಿಲ್ ಜಾಗದಲ್ಲಿನ ಜಮೀನನ್ನು ರೈಲ್ವೆ ಇಲಾಖೆಯ ವಿಸ್ತೀರ್ಣ ಕಾರ್ಯಕ್ಕೆ ತುರ್ತು ವಿಧಿ ಬಳಸಿ ಭೂಸ್ವಾಧೀನ ಪಡಿಸಿಕೊಳ್ಳಲು ಸಂಬಂಧಿಸಿದ ದಾಖಲೆಗಳೊಂದಿಗೆ ಕಡತವನ್ನು ಸಲ್ಲಿಸಲು ಕೋರಿರುತ್ತಾರೆ.

ಈ ಸಂಬಂಧ ಕಾರ್ಯಪಾಲಕ ಅಭಿಯಂತರರು (ಯೋಜನೆ ಕೇಂದ್ರ-2) ದಿನಾಂಕ:07-12-2012 ರಂದು ಸಂಬಂಧಪಟ್ಟ ಪಾಲಿಕೆಯ ಕಂದಾಯ, ಕಾಮಗಾರಿ ಇಲಾಖೆಯ ಹಾಗೂ ನೈರುತ್ಯ ರೈಲ್ವೆ ಇಲಾಖೆಯ ಅಧಿಕಾರಿಗಳೊಂದಿಗೆ ಸ್ಥಳ ಪರಿವೀಕ್ಷಣೆ ಮಾಡಿದಾಗ ಪಾಲಿಕೆ ಸರ್ವೆಯರ್ (ಆಸ್ತಿಗಳು) ರವರು ತಯಾರಿಸಿರುವ ನಕಾಶೆಯಲ್ಲಿ ತಿಳಿಸಿದಂತೆ ನೈರುತ್ಯ ರೈಲ್ವೆ ಇಲಾಖೆಯವರು ಕೋರಿರುವ ಬಿನ್ನಿಮಿಲ್ ಜಾಗದ (ಪಾಲಿಕೆಯ ದಾಖಲಾತಿಯಲ್ಲಿ M/s. S.V.Global Mill Limited ರವರ ಹೆಸರಿನಲ್ಲಿ ನೋಂದಾಣಿಯಾಗಿರುತ್ತದೆ) ಒಟ್ಟು ವಿಸ್ತೀರ್ಣವು 12818.00 ಚ.ಮೀ. ಅಥವಾ 1,37,972.95 ಚ.ಅ. ಜಾಗವನ್ನು ನೋಂದಣಿ ಮತ್ತು ಮುದ್ರಾಂಕ ಇಲಾಖೆಯವರು ಹೊರಡಿಸಿರುವ ಅಧಿಸೂಚನೆ ಸಂಖ್ಯೆ:CVC-19/2010-11 Bangalore ದಿನಾಂಕ: 21-09-2011 ರಂತೆ ಬಿನ್ನಿಮಿಲ್ ರಸ್ತೆಯಲ್ಲಿ ಅಂದಾಜು ಮಾರುಕಟ್ಟೆ ಮೊತ್ತ ರೂ.3000.00 ಚ.ಅಡಿಗೆ ಇದ್ದು, ಈ ಯೋಜನೆಗೆ ಸ್ವಾಧೀನ ಪಡಿಸಿಕೊಳ್ಳಬೇಕಾದ ಬಿನ್ನಿಮಿಲ್ (ಪಾಲಿಕೆಯ ದಾಖಲಾತಿಯಲ್ಲಿ S.V.Global Mill Limited ರವರ ಹೆಸರಿನಲ್ಲಿ ನೊಂದಾವಣಿಯಾಗಿರುತ್ತದೆ) ಜಾಗದ ವಿಸ್ತೀರ್ಣವಾದ 1,37,972.95 ಚ.ಅಡಿ ಜಾಗದ ಒಟ್ಟು ಸ್ವಾಧೀನ ಮೊತ್ತ ರೂ.58,79,14,767.00 (ಐವತ್ತೆಂಟು ಕೋಟಿ ಎಪ್ಪತ್ತೊಂಭತ್ತು ಲಕ್ಷದ ಹದಿನಾಲ್ಕು ಸಾವಿರದ ಏಳು ನೂರ ಅರವತ್ತೇಳು ರೂಪಾಯಿಗಳು) ಗಳಾಗಿದ್ದು, ಈ ಭೂಸ್ವಾಧೀನದ ಮೊತ್ತವನ್ನು ಸ್ಥಳೀಯ ಕಾಟನ್‌ಪೇಟೆ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಸಹಾಯಕ ಕಂದಾಯ ಅಧಿಕಾರಿಗಳು ದೃಢೀಕರಿಸಿರುತ್ತಾರೆ ಹಾಗೂ ಪಾಲಿಕೆಯ ಸರ್ವೆಯರ್ (ಆಸ್ತಿಗಳು) ರವರು ತಯಾರಿಸಿರುವ ನಕಾಶೆಯನ್ನು ದೃಢೀಕೃತ ಮಾಡಿ ಹಾಗೂ ಕಂದಾಯ ಇಲಾಖೆಯಿಂದ ಈ ಸ್ವತ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಪಡೆದಿದ್ದು, ಸದರಿ ಭೂಸ್ವಾಧೀನದ ಪ್ರಸ್ತಾವನೆಗೆ ಆಯುಕ್ತರು ಅನುಮೋದನೆ ನೀಡಿರುತ್ತಾರೆ.

## <u>ಭೂ ಪರಿಹಾರ ವೆಚ್ಚ</u>

| | |
|---|---|
| ಭೂ ಸ್ವಾಧೀನಪಡಿಸಿಕೊಳ್ಳುವ ವಿಸ್ತೀರ್ಣ | 137972.95 ಚ.ಅಡಿ |
| ಮಾರ್ಗಸೂಚಿ ಬೆಲೆ | 1,37,972.95x3000.00=41,39,18,850.00 (ರೂ.3000.00/- ಒಂದು ಚದರ ಅಡಿಗೆ) |
| ಭೂಸ್ವಾಧೀನ ಕಾಯ್ದೆ 1894ರ 23(1)ಎ ಶೇಕಡ 12%ರ ಹೆಚ್ಚುವರಿ ಮಾರುಕಟ್ಟೆ ಬೆಲೆ | 4,96,70,262.00 |
| ಭೂಸ್ವಾಧೀನ ಕಾಯ್ದೆ 1894ರ 23(2)ರ ಅನ್ವಯ ಶೇಕಡ 30%ರ ಶಾಸನಬದ್ಧ ಭತ್ಯೆ | 12,41,75,655.00 |
| ಒಟ್ಟು ಮೊತ್ತ | 58,77,64,767.00 |

..........................3

C

| | |
|---|---|
| ಸಿಬ್ಬಂದಿ ವೆಚ್ಚ ಶೇಕಡ 10% ರಂತೆ | - ಇಲ್ಲ - |
| ಆಡಿಟ್ ವೆಚ್ಚ ಶೇಕಡ 1% ರಂತೆ | - ಇಲ್ಲ - |
| ಪ್ರಕಟಣೆ ವೆಚ್ಚ | 1,50,000.00 |
| **ಒಟ್ಟು ಮೊತ್ತ** | **ರೂ. 58,79,14,767.00** |

ಮೇಲ್ಕಂಡ ಭೂಸ್ವಾಧೀನ ಮಾಡಿಕೊಳ್ಳಬೇಕಾದ ಬಿನ್ನಿಮಿಲ್ ಜಾಗದ ವಿಸ್ತೀರ್ಣವಾದ 1,.37,972.95 ಚ.ಅಡಿ ಜಾಗದ ಒಟ್ಟು ಸ್ವಾಧೀನ ಮೊತ್ತ ರೂ.58,79,14,767.00 ಗಳನ್ನು (ಐವತ್ತೆಂಟು ಕೋಟಿ ಎಪ್ಪತ್ತೊಂಭತ್ತು ಲಕ್ಷದ ಹದಿನಾಲ್ಕು ಸಾವಿರದ ಏಳು ನೂರ ಅರವತ್ತೇಳು ರೂಪಾಯಿಗಳು) ಪಾಲಿಕೆಯು ಈಗ ಇರುವ ಆರ್ಥಿಕ ಪರಿಸ್ಥಿತಿಯಲ್ಲಿ ಭರಿಸಲು ಕಷ್ಟ ಸಾಧ್ಯತೆ ಇರುವುದರಿಂದ, ಸದರಿ ಸ್ವಾಧೀನ ಮೊತ್ತವಾದ ರೂ.58,79,14,767.00 ಗಳನ್ನು ಘನ ಸರ್ಕಾರದ Infrastructure cess (ಮೂಲ ಭೂತ ಸೌಕರ್ಯ ನಿಧಿ) ಯಿಂದ ಭರಿಸಲು ಆಯುಕ್ತರು ದಿನಾಂಕ:17-12-2012 ರಲ್ಲಿ ಘನ ಸರ್ಕಾರವನ್ನು ಕೋರಲು ಅನುಮೋದನೆ ನೀಡಲಾಗಿರುತ್ತದೆ.

ಪಾಲಿಕೆಯ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯಂತೆ ಭೂಸ್ವಾಧೀನ ಪ್ರಸ್ತಾವನೆಯನ್ನು ಸ್ಥಾಯಿ ಸಮಿತಿ/ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅನುಮೋದನೆ ಪಡೆದು ತದ ನಂತರ ಘನ ಸರ್ಕಾರದ ಅನುಮೋದನೆಗೆ ಸಲ್ಲಿಸಬೇಕಾಗಿರುತ್ತದೆ ಆದರೆ ಕಾಮಗಾರಿಗೆ ಶಂಕುಸ್ಥಾಪನೆ ಮಾಡಲು ಮಾನ್ಯ ಮುಖ್ಯಮಂತ್ರಿಗಳು 20-12-2012 ರಂದು ಈ ಯೋಜನೆಯ ಭೂಮಿ ಪೂಜೆ ಮಾಡಲು ಒಪ್ಪಿಗೆಯನ್ನು ನೀಡಿದ್ದು ಹಾಗೂ ಈ ದಿನದಂದು ನಡೆಯಲಿರುವ ಭೂಮಿಪೂಜೆ ಕಾರ್ಯಕ್ರಮಕ್ಕಾಗಿ ಎಲ್ಲಾ ಸಿದ್ಧತೆಯನ್ನು ಕೈಗೊಳ್ಳಲು ತಿಳಿಸಿರುತ್ತಾರೆ. ಆದುದರಿಂದ ತುರ್ತಾಗಿ ಭೂಸ್ವಾಧೀನಪಡಿಸಿಕೊಂಡು ರೈಲ್ವೆಯವರಿಗೆ ಹಸ್ತಾಂತರ ಮಾಡಿಕೊಡಬೇಕಾಗಿರುವುದರಿಂದ ಸದರಿ ಭೂಸ್ವಾಧೀನ ಪ್ರಸ್ತಾವನೆಯನ್ನು ಅನುಮೋದಿಸುವ ಪ್ರಾಧಿಕಾರವು ಘನ ಸರ್ಕಾರ ವ್ಯಾಪ್ತಿಯಲ್ಲಿ ಬರುವುದರಿಂದ ಈ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:15-12-2012ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 19-02-2013ರ ನಿರ್ಣಯ ಹಾಗೂ ಸದರಿ ನಿರ್ಣಯವನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:11-03-2013ರ ನಿರ್ಣಯ.

1. ನೈರುತ್ಯ ರೈಲ್ವೆ ಇಲಾಖೆಯವರು ಕೋರಿರುವ ಬಿನ್ನಿಮಿಲ್ ಜಾಗ (ಪಾಲಿಕೆಯ ದಾಖಲಾತಿಯಲ್ಲಿ M/s.S.V.Global Mill Limited ಹೆಸರಿನಲ್ಲಿ ನೋಂದಾಣಿಯಾಗಿರುತ್ತದೆ) ಒಟ್ಟು ವಿಸ್ತೀರ್ಣದ 12818.00 ಚ.ಮೀ. ಅಥವಾ 1,37,921.68 ಚ.ಅಡಿ ಜಾಗವನ್ನು ನೋಂದಣಿ ಮತ್ತು ಮುದ್ರಾಂಕ ಇಲಾಖೆಯವರು ಹೊರಡಿಸಿರುವ ಅಧಿಸೂಚನೆ ಸಂಖ್ಯೆ CVC-19/2010-11 Bangalore Dated:21-09-2011 ರಂತೆ ಬಿನ್ನಿಮಿಲ್ ರಸ್ತೆಯಲ್ಲಿ ಅಂದಾಜು ಮಾರುಕಟ್ಟೆ ಮೊತ್ತ ರೂ.3000.00 ಚ.ಅಡಿಗಳಿದ್ದು, ಈ ಯೋಜನೆಗೆ ಸ್ವಾಧೀನಪಡಿಸಿಕೊಳ್ಳಬೇಕಾದ ಬಿನ್ನಿಮಿಲ್ (ಪಾಲಿಕೆಯ ದಾಖಲಾತಿಯಲ್ಲಿ M/s.S.V.Global mill limited ರವರ ಹೆಸರಿನಲ್ಲಿ ನೋಂದಾಣಿಯಾಗಿರುತ್ತದೆ) ಜಾಗದ ವಿಸ್ತೀರ್ಣವಾದ 1,37,921.68 ಚ.ಅಡಿ ಜಾಗದ ಒಟ್ಟು ಸ್ವಾಧೀನ ಮೊತ್ತ ರೂ.58,79,14,767.00 (ಐವತ್ತೆಂಟು ಕೋಟಿ ಎಪ್ಪತ್ತೊಂಭತ್ತು ಲಕ್ಷದ ಹದಿನಾಲ್ಕು ಸಾವಿರದ ಏಳು ನೂರ ಅರವತ್ತೇಳು ರೂಪಾಯಿ) ಗಳಾಗಲಿದ್ದು, ಈ ಮೊತ್ತವನ್ನು ಈಗ ಇರುವ ಆರ್ಥಿಕ ಪರಿಸ್ಥಿತಿಯಲ್ಲಿ ಭರಿಸಲು ಕಷ್ಟಸಾಧ್ಯತೆ ಇರುವುದರಿಂದ ಸದರಿ ಸ್ವಾಧೀನ ಮೊತ್ತವಾದ ರೂ.58,79,14,767.00 ಗಳನ್ನು ಭರಿಸಲು ಘನ ಸರ್ಕಾರದ Infrastructure cess (ಮೂಲ ಸೌಕರ್ಯ ನಿಧಿ) ಯಿಂದ ಭರಿಸಲು ಘನ ಸರ್ಕಾರವನ್ನು ಕೋರುವ ಬಗ್ಗೆ ಅನುಮೋದನೆ.

...4

2. ಸದರಿ ಭೂಸ್ವಾಧೀನ ಪ್ರಕ್ರಿಯೆಯ ಪ್ರಸ್ತಾವನೆಯನ್ನು ಅನುಮೋದಿಸುವ ಆರ್ಥಿಕ ಪ್ರಾಧಿಕಾರವು ಸ್ಥಾಯಿ ಸಮಿತಿ/ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅನುಮೋದನೆ ಪಡೆದು ತದನಂತರ ಘನ ಸರ್ಕಾರದ ಅನುಮೋದನೆಗೆ ಸಲ್ಲಿಸಬೇಕಾಗಿರುತ್ತದೆ. ಆದರೆ ತುರ್ತಾಗಿ ಭೂಸ್ವಾಧೀನಪಡಿಸಿಕೊಂಡು ನೈರುತ್ಯ ರೈಲ್ವೆಯವರಿಗೆ ಹಸ್ತಾಂತರ ಮಾಡಬೇಕಾಗಿರುವುದರಿಂದ ಭೂಸ್ವಾಧೀನ ಪ್ರಸ್ತಾವನೆಯನ್ನು ಘನ ಸರ್ಕಾರಕ್ಕೆ ಸಲ್ಲಿಸಲು ಹಾಗೂ ಪ್ರಸ್ತಾವನೆಯನ್ನು ನೇರವಾಗಿ ಘನ ಸರ್ಕಾರಕ್ಕೆ ಸಲ್ಲಿಸಲು ತೆಗೆದುಕೊಂಡಿರುವ ಕ್ರಮವನ್ನು ಸ್ಥಿರೀಕರಿಸಲು ಅನುಮೋದನೆ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:11-03-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಹೆಚ್.ಆರ್.ಕೃಷ್ಣಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:11-03-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

## ದಿನಾಂಕ:18-09-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 10 (20)/2013-14

ಟಿಪ್ಪಣಿಯಲ್ಲಿ ವಿವರಿಸುವಂತೆ, ಬೆಂಗಳೂರು ಹೊರವಲಯ ರಸ್ತೆಯ ಬಿ.ಇ.ಎಲ್. ವೃತ್ತದಿಂದ ಹೆಚ್.ಎಂ.ಟಿ. ಮುಖ್ಯರಸ್ತೆ ಆಟದ ಮೈದಾನದ ಮುಖಾಂತರ ಸಿ.ಎಂ.ಟಿ.ಐ. ಸಂಸ್ಥೆಯ ಜಂಕ್ಷನ್ ಬಳಿ ರಾಷ್ಟ್ರೀಯ ಹೆದ್ದಾರಿ-04 (ಬೆಂಗಳೂರು-ತುಮಕೂರು ರಸ್ತೆ) ಗೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಯಾಗಿರುತ್ತದೆ. ಸದರಿ ರಸ್ತೆಯು ಬಹಳ ಕಿರಿದಾಗಿದ್ದು, ವಾಹನ ಸಂಚಾರ ದಟ್ಟಣೆಯು ಹೆಚ್ಚಾಗಿರುವುದರಿಂದ ವಾಹನಗಳ ಸುಗಮ ಸಂಚಾರಕ್ಕೆ ಅಡಚಣೆಯಾಗಿರುತ್ತದೆ.

ಈ ಮೇರೆಗೆ ಮಾನ್ಯ ಉಪ ಮುಖ್ಯಮಂತ್ರಿಗಳು ಆಯುಕ್ತರಿಗೆ ಪತ್ರ ಬರೆದು ಹೆಚ್.ಎಂ.ಟಿ. ಮುಖ್ಯರಸ್ತೆಯ ಹೆಚ್.ಎಂ.ಟಿ. ಸ್ಕೂಲ್ ಮೈದಾನದಿಂದ ರಾಷ್ಟ್ರೀಯ ಹೆದ್ದಾರಿ-4 (ಸಿ.ಎಂ.ಟಿ.ಐ) ಜಂಕ್ಷನ್‌ವರೆಗಿನ ರಸ್ತೆಯನ್ನು 80 ಅಡಿವರೆಗೆ ಅಗಲೀಕರಣಗೊಳಿಸಲು ಸೂಚಿಸಿರುತ್ತಾರೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಸಿದ್ಧಪಡಿಸಿರುವ ಪರಿಷ್ಕೃತ ಮಹಾ ನಕ್ಷೆ (RMP-2015) ಯಲ್ಲಿ ಸದರಿ ರಸ್ತೆಗೆ ಅಗಲೀಕರಣದ ಪ್ರಸ್ತಾವನೆ ಇಲ್ಲದ ಕಾರಣ ನಗರಾಭಿವೃದ್ಧಿ ಇಲಾಖೆಯ ಆದೇಶ ಸಂಖ್ಯೆ:UDD/154/Bem/Ru Pra/2004 ದಿನಾಂಕ:18-01-2005 ರಲ್ಲಿರುವಂತೆ "The authority shall publish annual programme for widening or construction of new road or for any other public purpose specified in Section 14(B) of the Act, for granting Transferable Development Rights" ಅಡಿಯಲ್ಲಿ ಸದರಿ ರಸ್ತೆಯನ್ನು 24.00 ಮೀ.ಗೆ ಅಗಲೀಕರಣ ಕೈಗೊಳ್ಳಬಹುದಾಗಿರುತ್ತದೆ.

ಜಂಟಿ ನಿರ್ದೇಶಕರು, ನಗರ ಯೋಜನೆ (ದಕ್ಷಿಣ) ರವರು ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ರಸ್ತೆಯ ಅಗಲೀಕರಣ ಪ್ರಸ್ತಾವನೆಯನ್ನು 24.00 ಮೀ.ಗೆ ಅಗಲೀಕರಣಗೊಳಿಸಿ ಅಭಿವೃದ್ಧಿಪಡಿಸುವುದು ಸೂಕ್ತವೆಂದು ಅಭಿಪ್ರಾಯಿಸಿರುತ್ತಾರೆ.

ಈ ಮೇರೆಗೆ ಬೆಂಗಳೂರು ಹೊರವಲಯ ರಸ್ತೆಯ ಬಿ.ಇ.ಎಲ್. ವೃತ್ತದಿಂದ ಹೆಚ್.ಎಂ.ಟಿ. ಮುಖ್ಯರಸ್ತೆಯ ಆಟದ ಮೈದಾನದ ಮುಖಾಂತರ ಸಿ.ಎಂ.ಟಿ.ಐ. ಸಂಸ್ಥೆಯ ಜಂಕ್ಷನ್ ಬಳಿ ರಾಷ್ಟ್ರೀಯ ಹೆದ್ದಾರಿ-04 (ಬೆಂಗಳೂರು-ತುಮಕೂರು ರಸ್ತೆ)ಗೆ ಸಂಪರ್ಕ ಕಲ್ಪಿಸುವ ರಸ್ತೆಯನ್ನು 24.00 ಮೀ. ಅಗಲಕ್ಕೆ ಅಗಲೀಕರಣಗೊಳಿಸಲು ಅನುಮೋದನೆ ಕೋರಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಮತ್ತು ಪಾಲಿಕೆ ಸಭೆಯ ಮುಂದೆ ಮಂಡಿಸಿ ಅನುಮೋದನೆ ಪಡೆದು ನಂತರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ ಸರ್ಕಾರದ ಅನುಮೋದನೆಯನ್ನು ಪಡೆದು ರಸ್ತೆ ಅಗಲೀಕರಣ ಪ್ರಕ್ರಿಯೆಯನ್ನು ಪ್ರಾರಂಭಿಸುವ ಬಗ್ಗೆ ಅನುಮೋದನೆ ಕೋರಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:06-03-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 11-03-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:11-03-2013ರ ನಿರ್ಣಯವನ್ನು ಒಪ್ಪುವುದು".

.......2

ಶ್ರೀ. ಹೆಚ್.ಆರ್.ಕೃಷ್ಣಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 11–03–2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:18-09-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 12 (22)/2013-14

ಟಿಪ್ಪಣಿಯಲ್ಲಿ ವಿವರಿಸುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಯಲಹಂಕ ರೈಲ್ವೆ ನಿಲ್ದಾಣದ ಯಾರ್ಡ್‌ನಲ್ಲಿ ಬರುವ ರೈಲ್ವೆ ಕಿ.ಮೀ.15/900 ಬಳಿ ರೈಲ್ವೆ ಇಲಾಖೆ ಹಾಗೂ ಪಾಲಿಕೆ ವತಿಯಿಂದ ಜಂಟಿಯಾಗಿ ಠೇವಣಿ ಕೊಡುಗೆ ಆಧಾರದ ಮೇಲೆ ರಸ್ತೆ ಕೆಳಸೇತುವೆ ನಿರ್ಮಾಣ ಮಾಡಲು ಉದ್ದೇಶಿಸಲಾಗಿರುತ್ತದೆ. ಈ ಮೇರೆಗೆ ಸದರಿ ಯೋಜನೆಯನ್ನು ರೈಲ್ವೆ ನಿಯಮಾವಳಿಗನುಗುಣವಾಗಿ ಡಿ.ಪಿ.ಆರ್. ತಯಾರಿಸಿ ಜಿ.ಎ.ಡಿ. ಅನುಮೋದನೆಗಾಗಿ ಸಲ್ಲಿಸಲಾಗಿರುತ್ತದೆ.

ಸದರಿ ಅಂದಾಜು ಪಟ್ಟಿಯು ರೈಲ್ವೆ ಇಲಾಖೆಯಿಂದ ನಿರ್ಮಿಸಬೇಕಾದ ಆರ್.ಸಿ.ಸಿ. ಬಾಕ್ಸ್ ಕಾಮಗಾರಿ ಮತ್ತು ಪಾಲಿಕೆ ವತಿಯಿಂದ ಕೈಗೊಳ್ಳಬೇಕಾದ ಕಾಮಗಾರಿಗಳಾದ ಅಪ್ರೋಚ್ ರಸ್ತೆ ನಿರ್ಮಾಣ, ಸರ್ವೀಸ್ ರಸ್ತೆ ನಿರ್ಮಾಣ, ಅವಶ್ಯವಿರುವ ಖಾಸಗಿ ಸ್ವತ್ತುಗಳ ಭೂ ಪರಿಹಾರದ ಮೊತ್ತ, ಮೂಲಭೂತ ಸೌಕರ್ಯಗಳ ಸ್ಥಳಾಂತರಕ್ಕೆ ಹೆಚ್ಚುವರಿ ಅನುದಾನ ಹಾಗೂ ವಿದ್ಯುತ್ ಕಾಮಗಾರಿಗಳನ್ನು ಒಳಗೊಂಡಿದ್ದು, ಅಂದಾಜು ಮೊತ್ತವು ರೂ.13.40 ಕೋಟಿಗಳಾಗಿರುತ್ತದೆ.

ಸದರಿ ಯೋಜನೆಯ ಅಂದಾಜು ಪಟ್ಟಿಯ ಮೊತ್ತವನ್ನು ಪಾಲಿಕೆಯ 2012-13ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆ:152ರ ಲೆಕ್ಕಶೀರ್ಷಿಕೆ ಪಿ-2032 ರಲ್ಲಿ ಯಲಹಂಕ ಹಳೆ ನಗರದ ಎದುರು ಎಂ.ಇ.ಎಸ್. ವೃತ್ತದ ಬಳಿ ರಸ್ತೆ ಕೆಳಸೇತುವೆ ನಿರ್ಮಾಣ ಕಾಮಗಾರಿಗೆ ಮೀಸಲಿಟ್ಟಿರುವ ರೂ.250.00 ಲಕ್ಷಗಳ ಅನುದಾನದಲ್ಲಿ ಭರಿಸಬಹುದಾಗಿದೆ.

ಈ ಮೇರೆಗೆ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:02-03-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:13-03-2013ರ ನಿರ್ಣಯ.

1. ಸದರಿ ಯೋಜನೆಯನ್ನು ಠೇವಣಿ ಆಧಾರದ ಮೇಲೆ ನಿರ್ವಹಿಸಲು ಅನುಮೋದನೆ.
2. ಠೇವಣಿ ಆಧಾರದ ಮೇಲೆ ರೈಲ್ವೆ ಇಲಾಖೆಯಿಂದ ಕೈಗೊಳ್ಳಬೇಕಾಗಿರುವ ಆರ್.ಸಿ.ಸಿ. ಬಾಕ್ಸ್ ಕಾಮಗಾರಿಯ ಮೊತ್ತವಾದ ರೂ.4.48 ಕೋಟಿಗಳಿಗೆ ಅನುಮೋದನೆ ಹಾಗೂ ಪಾಲಿಕೆ ವತಿಯಿಂದ ಕೈಗೊಳ್ಳಬೇಕಾದ ಅಪ್ರೋಚ್ ರಸ್ತೆ ಹಾಗೂ ಸರ್ವೀಸ್ ರಸ್ತೆ ನಿರ್ಮಾಣ, ಸದರಿ ರಸ್ತೆಗಳನ್ನು ನಿರ್ಮಿಸಲು ಅವಶ್ಯವಿರುವ ಭೂ ಪರಿಹಾರ, ಮೂಲಭೂತ ಸೌಕರ್ಯಗಳನ್ನು ಸ್ಥಳಾಂತರಿಸುವ ವೆಚ್ಚ ಮತ್ತು ವಿದ್ಯುದ್ದೀಕರಣ ಕಾಮಗಾರಿಗಳಿಗಾಗಿ ಅವಕಾಶ ಕಲ್ಪಿಸಲಾದ ಮೊತ್ತವಾದ ರೂ.8.92 ಕೋಟಿ, ಒಟ್ಟಾರೆ ಯೋಜನೆಯ ಅಂದಾಜು ಮೊತ್ತವಾದ ರೂ.13.40 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ.
3. ಸರ್ವೀಸ್ ರಸ್ತೆ ನಿರ್ಮಾಣಕ್ಕೆ ಅವಶ್ಯವಿರುವ ಖಾಸಗಿ ಸ್ವತ್ತುಗಳಿಗೆ ಭೂ ಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಲು ಅನುಮೋದನೆ.
4. ಸದರಿ ಯೋಜನೆಗೆ ಆಡಳಿತಾತ್ಮಕ ಅನುಮೋದನೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಅನುಮೋದನೆ.
5. ಸದರಿ ಯೋಜನೆಗೆ ಘನ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ ಅಂದಾಜು ಪಟ್ಟಿಗೆ ಮೇಲು ರುಜು ಮಾಡಿ ನೈರುತ್ಯ ಇಲಾಖೆಗೆ ಸಲ್ಲಿಸಲು ಹಾಗೂ ಸದರಿ ಕಾಮಗಾರಿಗೆ ಟೆಂಡರ್ ಆಹ್ವಾನಿಸಲು ಅನುಮೋದನೆ.
6. ಘನ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ ರೈಲ್ವೆ ಇಲಾಖೆಗೆ ರೂ.4.48 ಕೋಟಿಗಳನ್ನು ಠೇವಣಿ ಇಡಲು ಅನುಮೋದನೆ.

....................2

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:13-03-2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಹೆಚ್.ಆರ್.ಕೃಷ್ಣಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ13-03-2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:18-09-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 13 (23)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, Widening of Road infront of Government properties on Lower Agaram Road on LHS side from Ch:1.65 to 1.85 Km (near canara bank) ಕಾಮಗಾರಿಯ ರೂ.80.00 ಲಕ್ಷಗಳ ಅಂದಾಜು ಮೊತ್ತಕ್ಕೆ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯು ವಿಷಯ ಸಂಖ್ಯೆ:ಬೃ.ಸಾ.ಕ.ಸ್ಥಾ.ಸ/229/2012-13 ದಿನಾಂಕ:27.02.2013ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿರುತ್ತದೆ.

ಈ ಮೇರೆಗೆ ಕಾರ್ಯಪಾಲಕ ಅಭಿಯಂತರರು, ರಮೂಸೌ-ರಸ್ತೆ ಅಗಲೀಕರಣ ವಿಭಾಗದವರು e-Procurement ಅಡಿಯಲ್ಲಿ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಿದ್ದು, ಸದರಿ ಟೆಂಡರ್‌ನಲ್ಲಿ ಒಟ್ಟು 3 ಗುತ್ತಿಗೆದಾರರು ಭಾಗವಹಿಸಿದ್ದು, ಈ ಪೈಕಿ ತಾಂತ್ರಿಕ ಬಿಡ್‌ನಲ್ಲಿ ಏಕಮಾತ್ರ ಗುತ್ತಿಗೆದಾರರು ಅರ್ಹತೆ ಹೊಂದಿರುತ್ತಾರೆ. ಇವರ ಆರ್ಥಿಕ ಬಿಡ್ ತೆರೆಯಲಾಗಿ ಶ್ರೀ.ಎಸ್.ವೇಣುಗೋಪಾಲ ರೆಡ್ಡಿ ರವರು ನಮೂದಿಸಿರುವ ಮೊತ್ತದ ವಿವರ ಕೆಳಕಂಡತಿರುತ್ತದೆ.

| ಕ್ರ ಸಂ | ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹರಾದ ಗುತ್ತಿಗೆದಾರರ ಹೆಸರು | ಟೆಂಡರ್‌ಗಿಟ್ಟ ಮೊತ್ತ ರೂ ಗಳಲ್ಲಿ | ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ಮೊತ್ತ | 2012-13ನೇ ಸಾಲಿನ ಪರಿಷ್ಕೃತ ದರಪಟ್ಟಿಗೆ ಹೋಲಿಸಿದಾಗ | 2013-14ನೇ ಸಾಲಿನ ದರಪಟ್ಟಿಯ ದರಗಳಿಗೆ ಹೋಲಿಸಿದಾಗ |
|---|---|---|---|---|---|
| 1 | ಶ್ರೀ.ಎಸ್.ವೇಣುಗೋಪಾಲ ರೆಡ್ಡಿ | 77,95,664.00 | 89,30,532.00 | 14.55% ಹೆಚ್ಚು | 5.19% ಹೆಚ್ಚು |

ಸದರಿ ಟೆಂಡರ್‌ನಲ್ಲಿ ತಾಂತ್ರಿಕವಾಗಿ ಅರ್ಹರಾದ ಏಕಮಾತ್ರ ಗುತ್ತಿಗೆದಾರರಾದ ಶ್ರೀ.ಎಸ್.ವೇಣುಗೋಪಾಲ ರೆಡ್ಡಿ ರವರ ಟೆಂಡರ್ ಅನ್ನು 2012-13 ನೇ ಸಾಲಿನ ಬೆಂಗಳೂರು ವೃತ್ತದ ಲೋಕೋಪಯೋಗಿ ಇಲಾಖೆಯ ಪರಿಷ್ಕೃತ ದರಪಟ್ಟಿಯ ದರಗಳಿಗೆ ಹೋಲಿಸಿದಾಗ ಟೆಂಡರ್ ದರವು ಶೇಕಡ 14.55 ರಷ್ಟು ಹೆಚ್ಚು ಇರುತ್ತದೆ ಹಾಗೂ 2013-14ನೇ ಸಾಲಿನ ಬೆಂಗಳೂರು ವೃತ್ತದ ಲೋಕೋಪಯೋಗಿ ಇಲಾಖೆಯ ದರಪಟ್ಟಿಯ ದರಗಳಿಗೆ ಹೋಲಿಸಿದಾಗ ಟೆಂಡರ್ ದರವು ಶೇಕಡ 5.19 ರಷ್ಟು ಹೆಚ್ಚು ಇರುತ್ತದೆ.

ಸದರಿ ರಸ್ತೆ ಅಗಲೀಕರಣ ಯೋಜನೆಯು ತುರ್ತಾಗಿದ್ದು e-procurement ನಲ್ಲಿ ಟೆಂಡರ್ ಆಹ್ವಾನಿಸಿದ್ದು ಪ್ರಮುಖ ದಿನಪತ್ರಿಕೆಯಲ್ಲಿ ಪ್ರಚುರ ಪಡಿಸಿದ್ದು ಪಾಲಿಕೆ ವೆಬ್‌ಸೈಟ್‌ನಲ್ಲಿಯೂ ಟೆಂಡರ್ ಪ್ರಕಟಿಸಿದ್ದರೂ ಸಹ ಟೆಂಡರ್‌ನಲ್ಲಿ 3 ಗುತ್ತಿಗೆದಾರರು ಭಾಗವಹಿಸಿರುತ್ತಾರೆ. ಇವರ ಪೈಕಿ ಏಕಮಾತ್ರ ಗುತ್ತಿಗೆದಾರರು ತಾಂತ್ರಿಕ ಅರ್ಹತೆ ಹೊಂದಿದ್ದು, ಏಕಮಾತ್ರ ಆರ್ಥಿಕ ಬಿಡ್ ತೆರೆಯಲಾಗಿದೆ.

ಈ ಹಿನ್ನಲೆಯಲ್ಲಿ, ಇದನ್ನು ಸ್ಪರ್ಧಾತ್ಮಕ ಬಿಡ್ ಎಂದು ಪರಿಗಣಿಸಿದ್ದು ನಮೂದಿಸಿರುವ ಟೆಂಡರ್ ದರವು ಸಹ ಸಮಂಜಸವಾಗಿರುವುದರಿಂದ ಈ ಟೆಂಡರ್‌ನ್ನು ಪರಿಗಣಿಸಬಹುದಾಗಿದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಸದರಿ ಕಾಮಗಾರಿಯ ಟೆಂಡರ್‌ನ ಗುತ್ತಿಗೆದಾರರಾದ ಶ್ರೀ.ಎಸ್.ವೇಣುಗೋಪಾಲ ರೆಡ್ಡಿ ರವರ ಗುತ್ತಿಗೆ ಮೊತ್ತ ರೂ.89,30,532.00 (ರೂಪಾಯಿ ಎಂಬತ್ತೊಂಭತ್ತು ಲಕ್ಷದ ಮೂವತ್ತು ಸಾವಿರದ ಐದು ನೂರ ಮೂವತ್ತೆರಡು ಮಾತ್ರ)ಗಳ ಟೆಂಡರ್‌ಗೆ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 20-08-2013ರ ಟಿಪ್ಪಣಿ.

.....................2

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ವಿಷಯವನ್ನು ಮುಂದೂಡಲು ಸೂಚಿಸಿದರು.

ಶ್ರೀ. ಹೆಚ್.ಆರ್.ಕೃಷ್ಣಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ಸೂಚನೆಯನ್ನು ಅನುಮೋದಿಸಿದರು.

ಚರ್ಚೆಯ ನಂತರ ಸಭೆಯಲ್ಲಿ ಪ್ರಸ್ತಾವನೆಯನ್ನು ಒಪ್ಪಲು ಅಭಿಪ್ರಾಯ ವ್ಯಕ್ತವಾಯಿತು. ಈ ಹಿನ್ನಲೆಯಲ್ಲಿ ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡಂತೆ ನಿರ್ಣಯವನ್ನು ಮಾರ್ಪಡಿಸಿದರು.

"ಆಯುಕ್ತರವರ ದಿನಾಂಕ:20–08–2013ರ ಟಿಪ್ಪಣಿಯನ್ನು ಒಪ್ಪುವುದು".

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಆಯುಕ್ತರವರ ದಿನಾಂಕ:20–08–2013ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:18-09-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 14 (24)/2013-14

ಟಿಪ್ಪಣಿಯಲ್ಲಿ ವಿವರಿಸುವಂತೆ, ಬ್ಯಾಟರಾಯನಪುರ ವಲಯದ ಯಶವಂತಪುರ ಹಾಗೂ ಯಲಹಂಕ ಮಧ್ಯ ರೈಲ್ವೆ ಹಳಿಗೆ (ಅಲ್ಲಾಳಸಂದ್ರ ಹತ್ತಿರ) ಅಡ್ಡಲಾಗಿ ರೈಲ್ವೆ ಕೆಳಸೇತುವೆ ಹಾಗೂ ನ್ಯಾಯಾಂಗ ಬಡಾವಣೆಗೆ ಸಂಪರ್ಕ ಕಲ್ಪಿಸುವ ಸೇತುವೆ ನಿರ್ಮಾಣ ಯೋಜನೆಗೆ ಘನ ಸರ್ಕಾರವು ಆದೇಶ ಸಂಖ್ಯೆ:ನಅಇ 496 ಎಂಎನ್‌ವೈ 2008, ದಿನಾಂಕ:29-05-2009 ರಲ್ಲಿ ರೂ.30.00 ಕೋಟಿಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿರುತ್ತದೆ.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು Elevated Express Highway ಯನ್ನು ಸದರಿ ರೈಲ್ವೆ ಲೈನ್‌ಗೆ ಸಮಾನಾಂತರವಾಗಿ ನಿರ್ಮಾಣ ಮಾಡುತ್ತಿರುವುದರಿಂದ ಸದರಿ ಅನುಮೋದಿತ ರೈಲ್ವೆ ಕೆಳಸೇತುವೆ ನಿರ್ಮಾಣ ಯೋಜನೆಯನ್ನು ಅಲ್ಲಾಳಸಂದ್ರ ಗೇಟ್‌ಗೆ ಸೀಮಿತಗೊಳಿಸಿ ರೈಲ್ವೆ ಮೇಲುಸೇತುವೆಯಾಗಿ ನಿರ್ಮಾಣ ಮಾಡಲು ಬದಲಾಯಿಸಿದ್ದು, ಸದರಿ ಬದಲಾದ ರೈಲ್ವೆ ಮೇಲುಸೇತುವೆ ಯೋಜನೆಯ ಮೊತ್ತವಾದ ರೂ.26.00 ಕೋಟಿಗಳಿಗೆ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯು ದಿನಾಂಕ:08-03-2012 ರಂದು ನಡೆದ ಸಭೆಯಲ್ಲಿ ವಿಷಯ ಸಂಖ್ಯೆ:202/2011-12 ರಲ್ಲಿ ಹಾಗೂ ಪಾಲಿಕೆ ಸಭೆಯು ವಿಷಯ ಸಂಖ್ಯೆ:12(387)/2011-12, ದಿನಾಂಕ: 28-03-2012 ರಂದು ಆಡಳಿತಾತ್ಮಕ ಅನುಮೋದನೆ ನೀಡಿರುತ್ತದೆ.

ಸದರಿ ಯೋಜನೆಯನ್ನು ನ್ಯಾಯಾಂಗ ಬಡಾವಣೆಗೂ ಸಹ ವಿಸ್ತರಿಸಲು ಕೋರಿದ್ದರ ಮೇರೆಗೆ ಅಲ್ಲಾಳಸಂದ್ರ ಬಳಿ ನಿರ್ಮಿಸಲು ಉದ್ದೇಶಿಸಿದ್ದ ಮೇಲು ಸೇತುವೆ ಯೋಜನೆಯನ್ನು ನ್ಯಾಯಾಂಗ ಬಡಾವಣೆಗೂ ವಿಸ್ತರಿಸಿ ಅಂದಾಜು ಪಟ್ಟಿಯನ್ನು ಪರಿಷ್ಕರಿಸಲಾಗಿದ್ದು, ಸದರಿ ಪರಿಷ್ಕೃತ ಯೋಜನೆಯ ಅಂದಾಜು ಮೊತ್ತವು ರೂ.32.75 ಕೋಟಿಗಳಾಗಿದ್ದು, ಸದರಿ ಮೊತ್ತವನ್ನು Cost Sharing ಕಾಮಗಾರಿಯಾಗಿ ನಿರ್ವಹಿಸುವುದಾಗಿ ಹಾಗೂ ಸದರಿ ಪರಿಷ್ಕೃತ ಯೋಜನೆಗೆ ಅನುಮೋದನೆ ನೀಡಲು ರೈಲ್ವೆ ಇಲಾಖೆಯವರು ಕೋರಿದ್ದು, ಈ ಮೇರೆಗೆ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಅಪರ ಆಯುಕ್ತರು (ಯೋಜನೆ) ರವರ ದಿನಾಂಕ:25-01-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:13-03-2013ರ ನಿರ್ಣಯ.

1. ಸದರಿ ಯೋಜನೆಯನ್ನು ನ್ಯಾಯಾಂಗ ಬಡಾವಣೆಗೂ ವಿಸ್ತರಿಸಿರುವುದರಿಂದ ಪರಿಷ್ಕೃತ ಅಂದಾಜು ಮೊತ್ತ ರೂ.32.75 ಕೋಟಿಗಳಿಗೆ ಅನುಮೋದನೆ.
2. ಸದರಿ ಯೋಜನೆಯ ಪರಿಷ್ಕೃತ GAD ಗೆ ಅನುಮೋದನೆ.
3. ಸದರಿ ಪರಿಷ್ಕೃತ ಅಂದಾಜು ಮೊತ್ತವಾದ ರೂ.32.75 ಕೋಟಿಗಳಲ್ಲಿ ಪಾಲಿಕೆಯ ಭಾಗದ ಮೊತ್ತವಾದ ರೂ.19.05 ಕೋಟಿಗಳನ್ನು ರೈಲ್ವೆ ಇಲಾಖೆಗೆ ಠೇವಣಿ ಮಾಡಲು ಅನುಮೋದನೆ.
4. ಈಗಾಗಲೇ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಭೆಯಿಂದ ಆಡಳಿತಾತ್ಮಕ ಮಂಜೂರಾದ ಯೋಜನಯ ಮೊತ್ತವಾದ ರೂ.26.00 ಕೋಟಿಗಳಿಗೆ ಬದಲಾಗಿ ಪರಿಷ್ಕೃತ ಮೊತ್ತ ರೂ.32.75 ಕೋಟಿಗಳಿಗೆ ಪರಿಷ್ಕೃತ ಅನುಮೋದನೆ.
5. ಸದರಿ ಪರಿಷ್ಕೃತ ಯೋಜನೆಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

..............2

"ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:13–03–2013ರ ನಿರ್ಣಯವನ್ನು ಒಪ್ಪುವುದು".

ಶ್ರೀ. ಹೆಚ್.ಆರ್.ಕೃಷ್ಣಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:13–03–2013ರ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:18-09-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 15 (25)/2013-14

ಟಿಪ್ಪಣಿಯಲ್ಲಿ ವಿವರಿಸುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ಹಲಸೂರು ಕೆರೆಗೆ ಹರಿಯುತ್ತಿರುವ ಕಲುಷಿತ ನೀರನ್ನು ಶುದ್ಧೀಕರಿಸಲು ನೂತನ ತಂತ್ರಜ್ಞಾನದ ಆಧಾರದ ನೀರು ಶುದ್ಧೀಕರಣ ಘಟಕವನ್ನು ಸ್ಥಾಪಿಸಲು ಮುಖ್ಯ ಅಭಿಯಂತರರು, ಕೆರೆಗಳು ರವರ ವಿಭಾಗದಿಂದ ಕೆರೆಯ ಸೆಡಿಮೆಂಟೇಷನ್ ಟ್ಯಾಂಕ್‌ನ ಹತ್ತಿರ Reclamation plant ಅಥವಾ Soil Bio Technology ಅಥವಾ Dewat ಅಥವಾ ಮುಂತಾದ ಹೊಸ ತಂತ್ರಜ್ಞಾನದ ನೀರು ಶುದ್ಧೀಕರಣದ ಘಟಕವನ್ನು DBOT ಆಧಾರದ ಮೇಲೆ ಸ್ಥಾಪಿಸಲು ಯೋಜಿಸಿದ್ದು, ಸದರಿ ಕಾಮಗಾರಿಯ ವೆಚ್ಚ ರೂ.4,90,00,000 (ನಾಲ್ಕು ಕೋಟಿ ತೊಂಭತ್ತು ಲಕ್ಷಗಳು) ಹಾಗೂ ಸದರಿ ವೆಚ್ಚವನ್ನು ಬಿ.ಬಿ.ಎಂ.ಪಿ. 2012-13ರ ಆಯವ್ಯಯದ ಪುಟ ಸಂಖ್ಯೆ:71 ರಲ್ಲಿನ ಪಿ-2718ರ ಕಗ್ಗದಾಸಪುರ ಕೆರೆ ಅಭಿವೃದ್ಧಿಯ ಅಡಿಯಲ್ಲಿ ಮೀಸಲಿಸಿರುವ ರೂ.200.00 ಲಕ್ಷಗಳನ್ನು ಹಾಗೂ ಉಳಿಕೆ ಹಣವನ್ನು ಮರುಹೊಂದಾಣಿಕೆಯನ್ನು ಮಾಡಿ ಹಲಸೂರು ಕೆರೆಯ ಸೆಡಿಮೆಂಟೇಷನ್ ಟ್ಯಾಂಕ್‌ನ ಜಾಗದಲ್ಲಿ ನೀರು ಶುದ್ಧೀಕರಣದ ಘಟಕವನ್ನು ಸ್ಥಾಪಿಸಲು ವಿನ್ಯಾಸ ನಿರ್ಮಾಣ ಚಾಲನೆ ಮತ್ತು ಹಸ್ತಾಂತರ (DBOT) ಆಧಾರದ ಮೇಲೆ ಇ-ಪ್ರೊಕ್ಯೂರ್‌ಮೆಂಟ್ ಆಧಾರದ ಮೇಲೆ ಕಾಮಗಾರಿಯನ್ನು ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ಕೋರಿರುತ್ತಾರೆ ಹಾಗೂ ಸದರಿ ಪ್ರಸ್ತಾವನೆಯನ್ನು ಮಾನ್ಯ ಆಯುಕ್ತರು ಅನುಮೋದಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಹಲಸೂರು ಕೆರೆಗೆ ಸೆಡಿಮೆಂಟೇಷನ್ ಟ್ಯಾಂಕ್‌ನ ಹತ್ತಿರ Reclamation plant ಅಥವಾ Soil Bio Technology ಅಥವಾ Dewat ಅಥವಾ ಮುಂತಾದ ಹೊಸ ತಂತ್ರಜ್ಞಾನದ ನೀರು ಶುದ್ಧೀಕರಣದ ಘಟಕವನ್ನು DBOT ಆಧಾರದ ಮೇಲೆ ಸ್ಥಾಪಿಸಲು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸುವ ಬಗ್ಗೆ ಆಡಳಿತಾತ್ಮಕ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:21-05-2013ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:21-05-2013ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ. ಹೆಚ್.ಆರ್.ಕೃಷ್ಣಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:21-05-2013ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:18-09-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 16 (32)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯು ಸುಮಾರು 800 ಚ.ಕಿ.ಮೀ ವಿಸ್ತೀರ್ಣವುಳ್ಳದಾಗಿದ್ದು, ಸುಮಾರು 10000 ಕಿ.ಮೀ ರಸ್ತೆಯ ಜಾಲವನ್ನು ಹೊಂದಿರುತ್ತದೆ. ಈ ರಸ್ತೆಯ ಜಾಲದಲ್ಲಿ ಪ್ರಮುಖವಾದ ಆರ್ಟಿರೀಯಲ್ ಮತ್ತು ಸಬ್ ಆರ್ಟೀರಿಯಲ್ ರಸ್ತೆಯ ಜಾಲವು ಸುಮಾರು 1900 ಕಿ.ಮೀ ಆಗಿರುತ್ತದೆ. ಈ ಆರ್ಟೀರಿಯಲ್ ಹಾಗೂ ಸಬ್ ಆರ್ಟೀರಿಯಲ್ ರಸ್ತೆಯ ಜಾಲದಲ್ಲಿ ಪ್ರಮುಖವಾದ ಸುಮಾರು 600 ಜಂಕ್ಷನ್‌ಗಳನ್ನು ಹೊಂದಿರುತ್ತದೆ. ಪ್ರಮುಖವಾಗಿ ಜಂಕ್ಷನ್‌ಗಳಲ್ಲಿ ಹಾಗೂ ಕಾರಿಡಾರ್‌ಗಳಲ್ಲಿ ರಸ್ತೆ ಮೇಲು ಸೇತುವೆಗಳನ್ನು ನಿರ್ಮಿಸುವ ಅಗತ್ಯತೆ ಇರುತ್ತದೆ.

ಈ ಹಿನ್ನೆಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ಬೆಂಗಳೂರು ನಗರದ 100 ಅಡಿ ರಸ್ತೆಯ ಈಜಿಪುರ-ಒಳವರ್ತುಲ ರಸ್ತೆ ಜಂಕ್ಷನ್‌ನಿಂದ ಕೇಂದ್ರಿಯ ಸದನ ಜಂಕ್ಷನ್ ವರೆಗೆ ಎಲಿವೇಟೆಡ್ ಕಾರಿಡಾರ್‌ನ ನಿರ್ಮಾಣ ಕಾಮಗಾರಿಯ ಸಂಬಂಧ ಕಾರ್ಯಸಾಧ್ಯತಾ ಯೋಜನಾ ವರದಿಯನ್ನು ತಯಾರಿಸಲಾಗಿದ್ದು, ಅದರಂತೆ ಸದರಿ ಯೋಜನೆಯಲ್ಲಿ ಈ ಕೆಳಕಂಡ ಮಾಹಿತಿಗಳು ಒಳಗೊಂಡಿರುತ್ತದೆ.

- ಕಾಮಗಾರಿಯ ಹೆಸರು : ಬೆಂಗಳೂರು ನಗರದ 100 ಅಡಿ ರಸ್ತೆಯ ಈಜಿಪುರ-ಒಳವರ್ತುಲ ರಸ್ತೆ ಜಂಕ್ಷನ್ ನಿಂದ ಕೇಂದ್ರಿಯ ಸದನ ಜಂಕ್ಷನ್‌ವರೆಗೆ ಎಲಿವೇಟೆಡ್ ಕಾರಿಡಾರ್‌ನ ನಿರ್ಮಾಣ ಕಾಮಗಾರಿಯ ಪ್ರಸ್ತಾವನೆ.
- ಕಾಮಗಾರಿಯ ಮೊತ್ತ : ರೂ. 214.04ಕೋಟಿಗಳು (ರೂ. 40.96ಕೋಟಿಗಳ ಭೂಸ್ವಾಧೀನ ವೆಚ್ಚ ಸೇರಿದಂತೆ)
- ಯೋಜನಾ ಘಟಕಗಳು :
  - ➢ ಚತುರ್ಮುಖ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದೆ. Flyover ನ ಉದ್ದ – 1024.55 ಮೀ
  - ➢ Vertical Clearance – 4.5 ಮೀ
  - ➢ Carriage way width– 7.5 ಮೀ X 2
  - ➢ Obligatory span
    - ○ ಸೋನಿವರ್ಲ್ಡ್ ಜಂಕ್ಷನ್ ಹತ್ತಿರ } – 40 ಮೀಟರ್
    - ○ ಈಜೀಪುರ ಮುಖ್ಯರಸ್ತೆ
  - ➢ Length of via duct towards Kendriya Sadana – 39.59 Mtrs.
  - ➢ Length of approach ramp towards Kendriya Sadana – 96.02 Mtrs.
  - ➢ Length of via duct towards Dommalur – 39.56 Mtrs.
  - ➢ Length of approach ramp towards Dommalur – 135.05 Mtrs.
  - ➢ Length of via duct between project junction – 624.30 Mtrs.
  - ➢ Required land acquisition area – 1818.74 Sqm.
    - ○ Rulling gradient – 5%
- ಅನುಷ್ಠಾನದ ಅವಧಿ : 30 ತಿಂಗಳು

.....................2

- ಕಾಮಗಾರಿಯ ಉದ್ದೇಶಗಳು :
  - ಸೋನಿವರ್ಲ್ಡ್ ಜಂಕ್ಷನ್ ಮತ್ತು ಶ್ರೀನಿವಾಗಿಲು ಜಂಕ್ಷನ್ ಅತ್ಯಂತ ವಾಹನ ಸಂಚಾರ ದಟ್ಟಣೆ ಜಂಕ್ಷನ್‌ಗಳಾಗಿರುತ್ತವೆ.
  - ಸದರಿ ಯೋಜನೆಯ ಹಲವು ಮುಖ್ಯರಸ್ತೆಗಳ ಸಂಪರ್ಕ ಸೇತುವೆಯಾಗಿರುತ್ತದೆ.
  - ಕೋರಮಂಗಲ, ಹಳೇ ವಿಮಾನ ನಿಲ್ದಾಣ ರಸ್ತೆ, ಮಾರತ್‌ಹಳ್ಳಿ, ಇಂದಿರಾನಗರ, ಮಡಿವಾಳ, ರಾಷ್ಟ್ರೀಯ ಹೆದ್ದಾರಿ–4, ಹಳೇ ಮದ್ರಾಸ್ ರಸ್ತೆಗಳಿಗೆ ಸಂಪರ್ಕ ಕಲ್ಪಿಸಲು.

- ಯೋಜನೆ ಅನುಷ್ಠಾನದಲ್ಲಿ ವಿವಿಧ ಇಲಾಖೆಗಳ ಸಮನ್ವಯತೆ: ಬೆಂಗಳೂರು ಜಲಮಂಡಳಿ, ಬೆಂಗಳೂರು ವಿದ್ಯುತ್ ನಿಯಮಿತ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಬೆಂಗಳೂರು ಸಂಚಾರ ಪೊಲೀಸ್ ಇತ್ಯಾದಿ.

ಕೇಂದ್ರ ಸರ್ಕಾರದ JnNURM ಯೋಜನೆಯಡಿ ಮಹಾನಗರ ಪಾಲಿಕೆಗಳಿಗೆ ಸಂಬಂಧಿಸಿದ ಕಾಮಗಾರಿಗಳಿಗೆ ಪ್ರಸ್ತಾವನೆಯನ್ನು ತಯಾರಿಸಿ ಕೂಡಲೇ ಕೇಂದ್ರ ಸರ್ಕಾರದ ಅನುಮೋದನೆಗಾಗಿ ಕಳುಹಿಸಿಕೊಡಲು ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ (KUIDFC) ರವರ ಮುಖಾಂತರ ಸರ್ಕಾರಕ್ಕೆ ಸಲ್ಲಿಸುವಂತೆ ಸರ್ಕಾರದಿಂದ ಸೂಚಿಸಿದ್ದ ಮೇರೆಗೆ ಮೇಲ್ಕಂಡ ಎಲಿವೇಟೆಡ್ ಕಾರಿಡಾರ್‌ನ ನಿರ್ಮಾಣದ ಪ್ರಸ್ತಾವನೆಯನ್ನು KUIDFC ಗೆ ಸಲ್ಲಿಸಲಾಗಿತ್ತು.

ಸದರಿ ಪ್ರಸ್ತಾವನೆಯನ್ನು ದಿನಾಂಕ:18.07.2013ರಂದು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ 3ನೇ JnNURM ನ ರಾಜ್ಯ ಮಟ್ಟದ ಸಂಚಾಲಕ ಸಮಿತಿ (State Level Steering Committee) ಸಭೆಯಲ್ಲಿ ಈ ಕೆಳಕಂಡ ಹಣಕಾಸು ಮಾದರಿಯೊಂದಿಗೆ ಕೇಂದ್ರ ಸರ್ಕಾರಕ್ಕೆ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಲು ಅನುಮೋದನೆ ನೀಡಿರುತ್ತದೆ.

(ರೂ. ಕೋಟಿಗಳಲ್ಲಿ)

| Name of the Proposals | Total Project Cost | GoI Share (35% ) | GoK Share (15%) | BBMP Share (50%) |
|---|---|---|---|---|
| Construction of Elevated Corridor along 100 feet Road from Ejipura – IRR Junction to Kendriya Sadana Junction, Bangalore. | 173.07 | 60.57 | 25.96 | 86.54 |

ರಾಜ್ಯ ಮಟ್ಟದ ಸಂಚಾಲಕ ಸಮಿತಿಯಿಂದ ಅನುಮೋದನೆ ನೀಡಿದ್ದ ಪ್ರಸ್ತುತ ಬೆಂಗಳೂರು ನಗರದ ವಿವಿಧ ಜಂಕ್ಷನ್‌ಗಳನ್ನು ಅಭಿವೃದ್ಧಿಪಡಿಸುವ ಪ್ರಸ್ತಾವನೆಯನ್ನು ವ್ಯವಸ್ಥಾಪಕ ನಿರ್ದೇಶಕರು, KUIDFC ರವರು ದಿನಾಂಕ: 30.07.2013ರಂದು ಕೇಂದ್ರ ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಕೇಂದ್ರ ನಗರಾಭಿವೃದ್ಧಿ ಇಲಾಖೆಯವರಿಗೆ ಅನುಮೋದನೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮುಂದುವರೆದು, ರಾಜ್ಯ ಸರ್ಕಾರದ 2013–14ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ರೂ.200.00 ಕೋಟಿಗಳ ಅನುದಾನವನ್ನು ಬೆಂಗಳೂರು ನಗರದ 100 ಅಡಿ ರಸ್ತೆಯ ಈಜಿಪುರ–ಒಳವರ್ತುಲ ರಸ್ತೆ ಜಂಕ್ಷನ್‌ನಿಂದ ಕೇಂದ್ರಿಯ ಸದನ ಜಂಕ್ಷನ್ ವರೆಗೆ ಎಲಿವೇಟೆಡ್ ಕಾರಿಡಾರ್‌ನ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಅನುದಾನವನ್ನು ನೀಡಿದ್ದು, ಆಯವ್ಯಯ ಭಾಷಣದಲ್ಲಿಯು ಸಹ ಮಾನ್ಯ ಮುಖ್ಯಮಂತ್ರಿಗಳು ಘೋಷಣೆ ಮಾಡಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಪ್ರಸ್ತಾವಿತ ಕಾಮಗಾರಿಯನ್ನು ಪಾಲಿಕೆಯಿಂದ ಕರ್ನಾಟಕ ರಾಜ್ಯ ಪಾರದರ್ಶಕ ಅಧಿನಿಯಮದ ಅನ್ವಯ ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ. 214.04 ಕೋಟಿಗಳು (ರೂ. 40.96 ಕೋಟಿಗಳ ಭೂಸ್ವಾಧೀನ ವೆಚ್ಚ ಸೇರಿದಂತೆ) ಕಾಮಗಾರಿಯನ್ನು ಸಾರ್ವಜನಿಕರ ಸುರಕ್ಷತೆ ಹಾಗೂ ರಕ್ಷಣೆಯ ಹಿತದೃಷ್ಠಿಯಿಂದ ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಸದರಿ ಕಾಮಗಾರಿಯನ್ನು ಒಂದು ವಿನೂತನ ಮತ್ತು ಮಾಧರಿ ವಿನ್ಯಾಸಗಳೊಂದಿಗೆ ನಿರ್ಮಿಸಲು ಅನುಮೋದಿತ ಅಂದಾಜಿಗೆ ಅನುಗುಣವಾಗಿ, "On Tenderer Own Design, Lumpsum, Turnkey" ಯೋಜನೆಯನ್ನಾಗಿ ಅಲ್ಪಾವಧಿ ಟೆಂಡರ್‌ನ್ನು ಕರೆಯಲು ಪಾಲಿಕೆಯ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿ ಹಾಗೂ ಸದರಿ ಕಾಮಗಾರಿಯು ಸರ್ಕಾರದ ಪರಿಷ್ಕೃತ ಆಯವ್ಯಯದಲ್ಲಿ ಸೇರ್ಪಡೆಗೊಂಡಿರುವ ಮಾಹಿತಿಯನ್ನು ಪಾಲಿಕೆ ಸಭೆಯ ನಡವಳಿಯಲ್ಲಿ ದಾಖಲಿಸುವ ಬಗ್ಗೆ ಅನುಮೋದನೆ ಕೋರಿ ಬೃಹತ್ ಬೆಂಗಳೂರುನ ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:26-08-2013ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:26-08-2013ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ. ಹೆಚ್.ಆರ್.ಕೃಷ್ಣಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:26-08-2013ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:18-09-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 17 (33)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ವಿವಿಧ ರಸ್ತೆಗಳು ವಾಹನ ದಟ್ಟಣೆಯಿಂದ ಕೂಡಿದ್ದು ಇಂತಹ ರಸ್ತೆಗಳಲ್ಲಿ ಹಾಗೂ ಕೂಡು ರಸ್ತೆಗಳಲ್ಲಿ ಪಾದಚಾರಿಗಳು ಸುರಕ್ಷಿತವಾಗಿ ರಸ್ತೆ ದಾಟಲು ತೊಂದರೆಯಾಗುತ್ತಿದ್ದು ಹಾಗೂ ರಸ್ತೆ ಅಪಘಾತಗಳು ಸಂಭವಿಸಿ ಜೀವಹಾನಿ ಆಗುವ ಸಂಭವಗಳನ್ನು ತಡೆಯಲು ಇಂತಹ ಸ್ಥಳಗಳಲ್ಲಿ ಪಾದಚಾರಿಗಳು ಸುರಕ್ಷಿತವಾಗಿ ರಸ್ತೆ ದಾಟಲು ಪಾದಚಾರಿ ಮೇಲುಸೇತುವೆ ನಿರ್ಮಿಸಲು ಸಾಧ್ಯಾಸಾಧ್ಯತೆಗಳನ್ನು ಅಧ್ಯಯನ ಮಾಡಿ ಸೂಕ್ತ ಯೋಜನಾ ವರದಿಯನ್ನು ತಯಾರಿಸಲಾಗಿದ್ದು, ಅದರಂತೆ ವರದಿಯು ಈ ಕೆಳಕಂಡ ಮಾಹಿತಿಗಳನ್ನು ಒಳಗೊಂಡಿರುತ್ತದೆ.

| | | |
|---|---|---|
| ಕಾಮಗಾರಿಯ ಹೆಸರು | : | ಹಡ್ಸನ್ ವೃತ್ತದಲ್ಲಿ 6 ವಿವಿಧ ಇಂಟರ್‌ಸೆಕ್ಷನ್‌ಗಳಲ್ಲಿ ಒಟ್ಟು ಸುಮಾರು 693ಮೀ. ಉದ್ದದ ಸ್ಕೈವಾಕ್ ನಿರ್ಮಾಣ ಮಾಡುವುದು. |
| ಕಾಮಗಾರಿಯ ಮೊತ್ತ | : | ರೂ. 41.48ಕೋಟಿಗಳು |
| ಯೋಜನಾ ಘಟಕಗಳು | : | ಪಾದಚಾರಿ ಮಾರ್ಗದೊಂದಿಗೆ 14 ಸಂಖ್ಯೆ ಮೆಟ್ಟಿಲುಗಳು, ಲಿಫ್ಟ್‌ಗಳು ಹಾಗೂ ಇನ್ನಿತರ ಅಗತ್ಯ ಕಾಮಗಾರಿಗಳು. |

- ಅನುಷ್ಠಾನದ ಅವಧಿ : 12 ತಿಂಗಳು

- ಕಾಮಗಾರಿಯ ಉದ್ದೇಶಗಳು :
  - ➢ ಪಾದಚಾರಿಗಳು ಕ್ರಮಿಸುವ ಸಮಯವನ್ನು ಕಡಿತಗೊಳಿಸುವುದು.
  - ➢ ಪಾದಚಾರಿಗಳು ರಸ್ತೆಯನ್ನು ದಾಟುವಾಗಿ ಸುರಕ್ಷಿತ ಮಾರ್ಗವನ್ನು ಕಲ್ಪಿಸುವುದು ಹಾಗೂ ವಾಹನಗಳಿಗೆ ಸಾರ್ವಜನಿಕರ ಅಡೆತಡೆಗಳನ್ನು ತಡೆಗಟ್ಟುವುದು.
  - ➢ ಮಕ್ಕಳು ಹಾಗೂ ಅಂಗವಿಕಲರಿಗೆ ರಸ್ತೆಯನ್ನು ಎಸ್ಕಲೇಟರ್ ಹಾಗೂ ಲಿಫ್ಟ್‌ಗಳ ಮುಖಾಂತರ ಸುಗಮವಾಗಿ ದಾಟಲು ಅನುಕೂಲ ಮಾಡಿಕೊಡುವುದು.

- ನಿರಾಕ್ಷೇಪಣೆ ಪಡೆಯುವ ಕಛೇರಿ: ಬೆಂಗಳೂರು ಜಲಮಂಡಳಿ, ಬೆಂಗಳೂರು ವಿದ್ಯುತ್ ನಿಯಮಿತ ಹಾಗೂ ಅರಣ್ಯ ಇಲಾಖೆಯಿಂದ ನಿರಾಕ್ಷೇಪಣೆಯನ್ನು ಪಡೆದು ಕಾಮಗಾರಿಯನ್ನು ಪೂರ್ಣಗೊಳಿಸುವುದು.

ಕೇಂದ್ರ ಸರ್ಕಾರದ JnNURM ಯೋಜನೆಯಡಿ ಮಹಾನಗರ ಪಾಲಿಕೆಗಳಿಗೆ ಸಂಬಂಧಿಸಿದ ಕಾಮಗಾರಿಗಳಿಗೆ ಪ್ರಸ್ತಾವನೆಯನ್ನು ತಯಾರಿಸಿ ಕೂಡಲೇ ಕೇಂದ್ರ ಸರ್ಕಾರದ ಅನುಮೋದನೆಗಾಗಿ ಕಳುಹಿಸಿಕೊಡಲು ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ (KUIDFC) ರವರ ಮುಖಾಂತರ ಸರ್ಕಾರಕ್ಕೆ ಸಲ್ಲಿಸುವಂತೆ ಸರ್ಕಾರದಿಂದ ಸೂಚಿಸಿದ್ದ ಮೇರೆಗೆ ಮೇಲ್ಕಂಡ ಸ್ಕೈವಾಕ್ ಪ್ರಸ್ತಾವನೆಯನ್ನು KUIDFC ಗೆ ಸಲ್ಲಿಸಲಾಗಿತ್ತು.

ಸದರಿ ಪ್ರಸ್ತಾವನೆಯನ್ನು ದಿನಾಂಕ:18.07.2013ರಂದು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ 3ನೇ JnNURM ನ ರಾಜ್ಯ ಮಟ್ಟದ ಸಂಚಾಲಕ ಸಮಿತಿ (State Level Steering Committee) ಸಭೆಯಲ್ಲಿ ಈ ಕೆಳಕಂಡ ಹಣಕಾಸು ಮಾದರಿಯೊಂದಿಗೆ ಕೇಂದ್ರ ಸರ್ಕಾರಕ್ಕೆ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಲು ಅನುಮೋದನೆ ನೀಡಿರುತ್ತದೆ.

.....................2

(ರೂ. ಕೋಟಿಗಳಲ್ಲಿ)

| Name of the Proposals | Total Project Cost | GoI Share (35% ) | GoK Share (15%) | BBMP Share (50%) |
|---|---|---|---|---|
| Proposed Skywalks at Hudson Circle. | 41.48 | 14.52 | 6.22 | 20.74 |

ರಾಜ್ಯ ಮಟ್ಟದ ಸಂಚಾಲಕ ಸಮಿತಿಯಿಂದ ಅನುಮೋದನೆ ನೀಡಿದ್ದ ಪ್ರಸ್ತುತ ಹಡ್ಸನ್ ವೃತ್ತದಲ್ಲಿ ಸ್ಕೈವಾಕ್ ನಿರ್ಮಾಣದ ಪ್ರಸ್ತಾವನೆಯನ್ನು ವ್ಯವಸ್ಥಾಪಕ ನಿರ್ದೇಶಕರು, KUIDFC ರವರು ದಿನಾಂಕ: 30.07.2013ರಂದು ಕೇಂದ್ರ ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಕೇಂದ್ರ ನಗರಾಭಿವೃದ್ಧಿ ಇಲಾಖೆಯವರಿಗೆ ಅನುಮೋದನೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮುಂದುವರೆದು, ರಾಜ್ಯ ಸರ್ಕಾರದ 2013-14ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ರೂ.100 ಕೋಟಿಗಳ ಅನುದಾನವನ್ನು ಬೆಂಗಳೂರು ನಗರದಲ್ಲಿ Pedestrian Skywalk ಗಳನ್ನು ಕೈಗೆತ್ತಿಕೊಳ್ಳಲು ಅನುದಾನವನ್ನು ನೀಡಿದ್ದು, ಆಯವ್ಯಯ ಭಾಷಣದಲ್ಲಿಯು ಸಹ ಮಾನ್ಯ ಮುಖ್ಯಮಂತ್ರಿಗಳು ಘೋಷಣೆ ಮಾಡಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಪ್ರಸ್ತಾವಿತ ಕಾಮಗಾರಿಯನ್ನು ಪಾಲಿಕೆಯಿಂದ ಕರ್ನಾಟಕ ರಾಜ್ಯ ಪಾರದರ್ಶಕ ಅಧಿನಿಯಮದ ಅನ್ವಯ ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.41.48 ಕೋಟಿಗಳ ಕಾಮಗಾರಿಯನ್ನು ಸಾರ್ವಜನಿಕರ ಸುರಕ್ಷತೆ ಹಾಗೂ ರಕ್ಷಣೆಯ ಹಿತದೃಷ್ಟಿಯಿಂದ ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಸದರಿ ಕಾಮಗಾರಿಯನ್ನು ಒಂದು ವಿನೂತನ ಮತ್ತು ಮಾಧರಿ ವಿನ್ಯಾಸಗಳೊಂದಿಗೆ ನಿರ್ಮಿಸಲು ಅನುಮೋದಿತ ಅಂದಾಜಿಗೆ ಅನುಗುಣವಾಗಿ, "On Tenderer Own Design, Lumpsum, Turnkey" ಯೋಜನೆಯನ್ನಾಗಿ ಅಲ್ಪಾವಧಿ ಟೆಂಡರ್‌ನ್ನು ಕರೆಯಲು ಪಾಲಿಕೆಯ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿ ಹಾಗೂ ಸದರಿ ಕಾಮಗಾರಿಗೆ ರಾಜ್ಯ ಮಟ್ಟದ ಸಂಚಾಲಕ ಸಮಿತಿಯಿಂದ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಅನುಮೋದನೆಗೊಂಡ ಈ ಯೋಜನೆಯನ್ನು ಪಾಲಿಕೆಯ ಸಭೆಯ ನಡವಳಿಯಲ್ಲಿ ದಾಖಲಿಸುವ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:26-08-2013ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:26-08-2013ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ. ಹೆಚ್.ಆರ್.ಕೃಷ್ಣಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:26-08-2013ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:18-09-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 18 (34)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯು ಸುಮಾರು 800 ಚ.ಕಿ.ಮೀ ವಿಸ್ತೀರ್ಣವುಳ್ಳದಾಗಿದ್ದು, ಸುಮಾರು 10000 ಕಿ.ಮೀ ರಸ್ತೆಯ ಜಾಲವನ್ನು ಹೊಂದಿರುತ್ತದೆ. ಈ ರಸ್ತೆಯ ಜಾಲದಲ್ಲಿ ಪ್ರಮುಖವಾದ ಆರ್ಟರೀಯಲ್ ಮತ್ತು ಸಬ್ ಆರ್ಟೀರಿಯಲ್ ರಸ್ತೆಯ ಜಾಲವು ಸುಮಾರು 1900 ಕಿ.ಮೀ ಆಗಿರುತ್ತದೆ. ಈ ಆರ್ಟೀರಿಯಲ್ ಹಾಗೂ ಸಬ್ ಆರ್ಟೀರಿಯಲ್ ರಸ್ತೆಯ ಜಾಲದಲ್ಲಿ ಪ್ರಮುಖವಾದ ಸುಮಾರು 600 ಜಂಕ್ಷನ್‌ಗಳನ್ನು ಹೊಂದಿದ್ದು. ಯಾವುದೇ ನಗರದಲ್ಲಿನ ಒಂದು ಸೌಂದರ್ಯ ಹಾಗೂ ನಗರದ ಪ್ರಾಮುಖ್ಯತೆಯನ್ನು ಜಂಕ್ಷನ್‌ನಲ್ಲಿನ ಅಭಿವೃದ್ಧಿಯು ಗೋಚರಿಸಿ ತೋರಿಸುತ್ತದೆ.

ಈ ಹಿನ್ನೆಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ಬಹು ಮುಖ್ಯ ಜಂಕ್ಷನ್‌ಗಳನ್ನು ಅಭಿವೃದ್ಧಿ ಪಡಿಸುವ ಸಂಬಂಧ ಸುಮಾರು 162 ಜಂಕ್ಷನ್‌ಗಳ ಅಭಿವೃದ್ಧಿ ಮಾಡಲು ಅಧ್ಯಯನ ಮಾಡಿ ಸೂಕ್ತ ಯೋಜನಾ ವರದಿಯನ್ನು ತಯಾರಿಸಿದ್ದು, ಅದರಂತೆ ವರದಿಯು ಈ ಕೆಳಕಂಡ ಮಾಹಿತಿಗಳನ್ನು ಒಳಗೊಂಡಿರುತ್ತದೆ.

- ಕಾಮಗಾರಿಯ ಹೆಸರು : ಬೆಂಗಳೂರು ನಗರದ ಅಪಘಾತಗಳನ್ನು ತಡೆಯಲು ಹಾಗೂ ಸಂಚಾರ ವ್ಯವಸ್ಥೆಯನ್ನು ಸುಗಮಗೊಳಿಸಲು ಜಂಕ್ಷನ್‌ಗಳನ್ನು ಅಭಿವೃದ್ಧಿ ಪಡಿಸುವ ಪ್ರಸ್ತಾವನೆ.
- ಕಾಮಗಾರಿಯ ಮೊತ್ತ : ರೂ. 99.96ಕೋಟಿಗಳು.
- ಯೋಜನಾ ಘಟಕಗಳು : ಪಾಲಿಕೆಯ ವ್ಯಾಪ್ತಿಯಲ್ಲಿನ ವಿವಿಧ ವಲಯಗಳ ಸುಮಾರು 162 ಜಂಕ್ಷನ್‌ಗಳನ್ನು ಸ್ಥಳಕ್ಕೆ ಅನುಗುಣವಾಗಿ ಅಭಿವೃದ್ಧಿಪಡಿಸುವುದು.
- ಅನುಷ್ಠಾನದ ಅವಧಿ : 6 ತಿಂಗಳು
- ಕಾಮಗಾರಿಯ ಉದ್ದೇಶಗಳು :
  - ➢ ಪಾದಚಾರಿಗಳು ರಸ್ತೆಯನ್ನು ದಾಟುವಾಗಿ ಸುರಕ್ಷಿತೆಯನ್ನು ಕಲ್ಪಿಸುವುದು ಹಾಗೂ ವಾಹನಗಳಿಗೆ ಸಾರ್ವಜನಿಕರ ಅಡೆತಡೆಗಳನ್ನು ತಡೆಗಟ್ಟುವುದು.
  - ➢ ಜಂಕ್ಷನ್‌ಗಳಲ್ಲಿ ರೈಡಿಂಗ್ ಕ್ವಾಲಿಟಿಯನ್ನು ಗುಣಪಡಿಸುವುದರಿಂದ ಸಂಚಾರ ಸಮಯ ಹಾಗೂ ವಾಹನ ನಿರ್ವಹಣೆ ವೆಚ್ಚವನ್ನು ಕಡಿಮೆಗೊಳಿಸುವುದು.
  - ➢ ಜಂಕ್ಷನ್‌ಗಳ ಸೌಂದರೀಕರಣದಿಂದಾಗಿ ನಗರದ ಅಂದವು ಹೆಚ್ಚುವುದು.

- ಯೋಜನೆ ಅನುಷ್ಠಾನದಲ್ಲಿ ವಿವಿಧ ಇಲಾಖೆಗಳ ಸಮನ್ವಯತೆ: ಬೆಂಗಳೂರು ಜಲಮಂಡಳಿ, ಬೆಂಗಳೂರು ವಿದ್ಯುತ್ ನಿಯಮಿತ ಹಾಗೂ ಬೆಂಗಳೂರು ಸಂಚಾರ ಪೊಲೀಸ್ ಇತ್ಯಾದಿ.

ಕೇಂದ್ರ ಸರ್ಕಾರದ JnNURM ಯೋಜನೆಯಡಿ ಮಹಾನಗರ ಪಾಲಿಕೆಗಳಿಗೆ ಸಂಬಂಧಿಸಿದ ಕಾಮಗಾರಿಗಳಿಗೆ ಪ್ರಸ್ತಾವನೆಯನ್ನು ತಯಾರಿಸಿ ಕೂಡಲೇ ಕೇಂದ್ರ ಸರ್ಕಾರದ ಅನುಮೋದನೆಗಾಗಿ ಕಳುಹಿಸಿಕೊಡಲು ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ (KUIDFC) ರವರ ಮುಖಾಂತರ ಸರ್ಕಾರಕ್ಕೆ ಸಲ್ಲಿಸುವಂತೆ ಸರ್ಕಾರದಿಂದ ಸೂಚಿಸಿದ್ದ ಮೇರೆಗೆ ಮೇಲ್ಕಂಡ ಸ್ಕೈವಾಕ್ ಪ್ರಸ್ತಾವನೆಯನ್ನು KUIDFC ಗೆ ಸಲ್ಲಿಸಲಾಗಿತ್ತು.

....................2

ಸದರಿ ಪ್ರಸ್ತಾವನೆಯನ್ನು ದಿನಾಂಕ: 18.07.2013ರಂದು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ 3ನೇ JnNURM ನ ರಾಜ್ಯ ಮಟ್ಟದ ಸಂಚಾಲಕ ಸಮಿತಿ (State Level Steering Committee) ಸಭೆಯಲ್ಲಿ ಈ ಕೆಳಕಂಡ ಹಣಕಾಸು ಮಾದರಿಯೊಂದಿಗೆ ಕೇಂದ್ರ ಸರ್ಕಾರಕ್ಕೆ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಲು ಅನುಮೋದನೆ ನೀಡಿರುತ್ತದೆ.

(ರೂ. ಕೋಟಿಗಳಲ್ಲಿ)

| Name of the Proposals | Total Project Cost | GoI Share (35% ) | GoK Share (15%) | BBMP Share (50%) |
|---|---|---|---|---|
| Junction Improvement works to minimize road traffic accidents and to smoothen traffic flow across Bangalore City. | 99.96 | 34.99 | 14.99 | 49.98 |

ರಾಜ್ಯ ಮಟ್ಟದ ಸಂಚಾಲಕ ಸಮಿತಿಯಿಂದ ಅನುಮೋದನೆ ನೀಡಿದ್ದ ಪ್ರಸ್ತುತ ಬೆಂಗಳೂರು ನಗರದ ವಿವಿಧ ಜಂಕ್ಷನ್‌ಗಳನ್ನು ಅಭಿವೃದ್ಧಿ ಪಡಿಸುವ ಪ್ರಸ್ತಾವನೆಯನ್ನು ವ್ಯವಸ್ಥಾಪಕ ನಿರ್ದೇಶಕರು, KUIDFC ರವರು ದಿನಾಂಕ: 30.07.2013ರಂದು ಕೇಂದ್ರ ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಕೇಂದ್ರ ನಗರಾಭಿವೃದ್ಧಿ ಇಲಾಖೆಯವರಿಗೆ ಅನುಮೋದನೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮುಂದುವರೆದು, ರಾಜ್ಯ ಸರ್ಕಾರದ 2013-14ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ರೂ.50.00 ಕೋಟಿಗಳ ಅನುದಾನವನ್ನು ಬೆಂಗಳೂರು ನಗರದಲ್ಲಿ Improvement of important junction ಗಳನ್ನು ಕೈಗೆತ್ತಿಕೊಳ್ಳಲು ಅನುದಾನವನ್ನು ನೀಡಿದ್ದು, ಆಯವ್ಯಯ ಭಾಷಣದಲ್ಲಿಯು ಸಹ ಮಾನ್ಯ ಮುಖ್ಯಮಂತ್ರಿಗಳು ಘೋಷಣೆ ಮಾಡಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಪ್ರಸ್ತಾವಿತ ಕಾಮಗಾರಿಯನ್ನು ಪಾಲಿಕೆಯಿಂದ ಕರ್ನಾಟಕ ರಾಜ್ಯ ಪಾರದರ್ಶಕ ಅಧಿನಿಯಮದ ಅನ್ವಯ ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ. 99.96 ಕೋಟಿಗಳ ಕಾಮಗಾರಿಯನ್ನು ಸಾರ್ವಜನಿಕರ ಸುರಕ್ಷತೆ ಹಾಗೂ ರಕ್ಷಣೆಯ ಹಿತದೃಷ್ಟಿಯಿಂದ ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಸದರಿ ಕಾಮಗಾರಿಯನ್ನು ಒಂದು ವಿನೂತನ ಮತ್ತು ಮಾಧರಿ ವಿನ್ಯಾಸಗಳೊಂದಿಗೆ ನಿರ್ಮಿಸಲು ಅನುಮೋದಿತ ಅಂದಾಜಿಗೆ ಅನುಗುಣವಾಗಿ, ಪ್ರತ್ಯೇಕ ಪ್ಯಾಕೇಜ್‌ಗಳಲ್ಲಿ ಅಲ್ಪಾವಧಿ ಟೆಂಡರ್‌ನ್ನು ಕರೆಯಲು ಪಾಲಿಕೆಯ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿ ಹಾಗೂ ಸದರಿ ಕಾಮಗಾರಿಗೆ ರಾಜ್ಯ ಮಟ್ಟದ ಸಂಚಾಲಕ ಸಮಿತಿಯಿಂದ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಅನುಮೋದನೆಗೊಂಡ ಈ ಯೋಜನೆಯನ್ನು ಪಾಲಿಕೆಯ ಸಭೆಯ ನಡವಳಿಯಲ್ಲಿ ದಾಖಲಿಸುವ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:26-08-2013ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:26-08-2013ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ. ಹೆಚ್.ಆರ್.ಕೃಷ್ಣಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:26-08-2013ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:18-09-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 19 (35)/2013-14

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ವಿವಿಧ ರಸ್ತೆಗಳು ವಾಹನ ದಟ್ಟಣೆಯಿಂದ ಕೂಡಿದ್ದು ಇಂತಹ ರಸ್ತೆಗಳಲ್ಲಿ ಹಾಗೂ ಕೂಡು ರಸ್ತೆಗಳಲ್ಲಿ ಪಾದಚಾರಿಗಳು ಸುರಕ್ಷಿತವಾಗಿ ರಸ್ತೆ ದಾಟಲು ತೊಂದರೆಯಾಗುತ್ತಿದ್ದು ಹಾಗೂ ರಸ್ತೆ ಅಪಘಾತಗಳು ಸಂಭವಿಸಿ ಜೀವಹಾನಿ ಆಗುವ ಸಂಭವಗಳನ್ನು ತಡೆಯಲು ಇಂತಹ ಸ್ಥಳಗಳಲ್ಲಿ ಪಾದಚಾರಿಗಳು ಸುರಕ್ಷಿತವಾಗಿ ರಸ್ತೆ ದಾಟಲು ಪಾದಚಾರಿ ಮೇಲುಸೇತುವೆ ನಿರ್ಮಿಸಲು ಸಾಧ್ಯಸಾಧ್ಯತೆಗಳನ್ನು ಅಧ್ಯಯನ ಮಾಡಿ ಸೂಕ್ತ ಯೋಜನಾ ವರದಿಯನ್ನು ತಯಾರಿಸಲಾಗಿದ್ದು, ಅದರಂತೆ ವರದಿಯು ಈ ಕೆಳಕಂಡ ಮಾಹಿತಿಗಳನ್ನು ಒಳಗೊಂಡಿರುತ್ತದೆ.

- ಕಾಮಗಾರಿಯ ಹೆಸರು : ಮೈಸೂರ್ ಬ್ಯಾಂಕ್ ವೃತ್ತದಲ್ಲಿ 4 ವಿವಿಧ ಇಂಟರ್ ಸೆಕ್ಷನ್‌ಗಳಲ್ಲಿ ಒಟ್ಟು ಸುಮಾರು 240ಮೀ. ಉದ್ದದ ಸ್ಕೈವಾಕ್ ನಿರ್ಮಾಣ ಮಾಡುವುದು.
- ಕಾಮಗಾರಿಯ ಮೊತ್ತ : ರೂ. 15.66 ಕೋಟಿಗಳು
- ಯೋಜನಾ ಘಟಕಗಳು : ಪಾದಚಾರಿ ಮಾರ್ಗದೊಂದಿಗೆ 5 ಸಂಖ್ಯೆ ಮೆಟ್ಟಿಲುಗಳು, ಲಿಫ್ಟ್‌ಗಳು ಹಾಗೂ ಇನ್ನಿತರ ಅಗತ್ಯ ಕಾಮಗಾರಿಗಳು.
- ಅನುಷ್ಠಾನದ ಅವಧಿ : 12 ತಿಂಗಳು
- ಕಾಮಗಾರಿಯ ಉದ್ದೇಶಗಳು :
  - ಪಾದಚಾರಿಗಳು ಕ್ರಮಿಸುವ ಸಮಯವನ್ನು ಕಡಿತಗೊಳಿಸುವುದು.
  - ಪಾದಚಾರಿಗಳು ರಸ್ತೆಯನ್ನು ದಾಟುವಾಗಿ ಸುರಕ್ಷಿತ ಮಾರ್ಗವನ್ನು ಕಲ್ಪಿಸುವುದು ಹಾಗೂ ವಾಹನಗಳಿಗೆ ಸಾರ್ವಜನಿಕರ ಅಡೆತಡೆಗಳನ್ನು ತಡೆಗಟ್ಟುವುದು.
  - ಮಕ್ಕಳು ಹಾಗೂ ಅಂಗವಿಕಲರಿಗೆ ರಸ್ತೆಯನ್ನು ಎಸ್ಕಲೇಟರ್ ಹಾಗೂ ಲಿಫ್ಟ್‌ಗಳ ಮುಖಾಂತರ ಸುಗಮವಾಗಿ ದಾಟಲು ಅನುಕೂಲ ಮಾಡಿಕೊಡುವುದು.
- ನಿರಾಕ್ಷೇಪಣೆ ಪಡೆಯುವ ಕಛೇರಿ: ಬೆಂಗಳೂರು ಜಲಮಂಡಳಿ, ಬೆಂಗಳೂರು ವಿದ್ಯುತ್ ನಿಯಮಿತ ಹಾಗೂ ಅರಣ್ಯ ಇಲಾಖೆಯಿಂದ ನಿರಾಕ್ಷೇಪಣೆಯನ್ನು ಪಡೆದು ಕಾಮಗಾರಿಯನ್ನು ಪೂರ್ಣಗೊಳಿಸುವುದು.

ಕೇಂದ್ರ ಸರ್ಕಾರದ JnNURM ಯೋಜನೆಯಡಿ ಮಹಾನಗರ ಪಾಲಿಕೆಗಳಿಗೆ ಸಂಬಂಧಿಸಿದ ಕಾಮಗಾರಿಗಳಿಗೆ ಪ್ರಸ್ತಾವನೆಯನ್ನು ತಯಾರಿಸಿ ಕೂಡಲೇ ಕೇಂದ್ರ ಸರ್ಕಾರದ ಅನುಮೋದನೆಗಾಗಿ ಕಳುಹಿಸಿಕೊಡಲು ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ (KUIDFC) ರವರ ಮುಖಾಂತರ ಸರ್ಕಾರಕ್ಕೆ ಸಲ್ಲಿಸುವಂತೆ ಸರ್ಕಾರದಿಂದ ಸೂಚಿಸಿದ್ದ ಮೇರೆಗೆ ಮೇಲ್ಕಂಡ ಸ್ಕೈವಾಕ್ ಪ್ರಸ್ತಾವನೆಯನ್ನು KUIDFC ಗೆ ಸಲ್ಲಿಸಲಾಗಿತ್ತು.

ಸದರಿ ಪ್ರಸ್ತಾವನೆಯನ್ನು ದಿನಾಂಕ:18.07.2013ರಂದು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ 3ನೇ JnNURM ನ ರಾಜ್ಯ ಮಟ್ಟದ ಸಂಚಾಲಕ ಸಮಿತಿ (State Level Steering Committee) ಸಭೆಯಲ್ಲಿ ಈ ಕೆಳಕಂಡ ಹಣಕಾಸು ಮಾದರಿಯೊಂದಿಗೆ ಕೇಂದ್ರ ಸರ್ಕಾರಕ್ಕೆ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಲು ಅನುಮೋದನೆ ನೀಡಿರುತ್ತದೆ.

(ರೂ. ಕೋಟಿಗಳಲ್ಲಿ)

| Name of the Proposals | Total Project Cost | GoI Share (35%) | GoK Share (15%) | BBMP Share (50%) |
|---|---|---|---|---|
| Proposed Skywalks at Mysore Bank Circle | 15.66 | 5.48 | 2.349 | 7.83 |

ರಾಜ್ಯ ಮಟ್ಟದ ಸಂಚಾಲಕ ಸಮಿತಿಯಿಂದ ಅನುಮೋದನೆ ನೀಡಿದ್ದ ಪ್ರಸ್ತುತ ಮೈಸೂರ್ ಬ್ಯಾಂಕ್ ವೃತ್ತದಲ್ಲಿ ಸ್ಕೈವಾಕ್ ನಿರ್ಮಾಣದ ಪ್ರಸ್ತಾವನೆಯನ್ನು ವ್ಯವಸ್ಥಾಪಕ ನಿರ್ದೇಶಕರು, KUIDFC ರವರು ದಿನಾಂಕ: 30.07.2013ರಂದು ಕೇಂದ್ರ ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಕೇಂದ್ರ ನಗರಾಭಿವೃದ್ಧಿ ಇಲಾಖೆಯವರಿಗೆ ಅನುಮೋದನೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮುಂದುವರೆದು, ರಾಜ್ಯ ಸರ್ಕಾರದ 2013–14ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ರೂ.100 ಕೋಟಿಗಳ ಅನುದಾನವನ್ನು ಬೆಂಗಳೂರು ನಗರದಲ್ಲಿ Pedestrian Skywalk ಗಳನ್ನು ಕೈಗೆತ್ತಿಕೊಳ್ಳಲು ಅನುದಾನವನ್ನು ನೀಡಿದ್ದು, ಆಯವ್ಯಯ ಭಾಷಣದಲ್ಲಿಯು ಸಹ ಮಾನ್ಯ ಮುಖ್ಯಮಂತ್ರಿಗಳು ಘೋಷಣೆ ಮಾಡಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಪ್ರಸ್ತಾವಿತ ಕಾಮಗಾರಿಯನ್ನು ಪಾಲಿಕೆಯಿಂದ ಕರ್ನಾಟಕ ರಾಜ್ಯ ಪಾರದರ್ಶಕ ಅಧಿನಿಯಮದ ಅನ್ವಯ ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ. 15.66 ಕೋಟಿಗಳ ಕಾಮಗಾರಿಯನ್ನು ಸಾರ್ವಜನಿಕರ ಸುರಕ್ಷತೆ ಹಾಗೂ ರಕ್ಷಣೆಯ ಹಿತದೃಷ್ಟಿಯಿಂದ ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಸದರಿ ಕಾಮಗಾರಿಯನ್ನು ಒಂದು ವಿನೂತನ ಮತ್ತು ಮಾಧರಿ ವಿನ್ಯಾಸಗಳೊಂದಿಗೆ ನಿರ್ಮಿಸಲು ಅನುಮೋದಿತ ಅಂದಾಜಿಗೆ ಅನುಗುಣವಾಗಿ, "On Tenderer Own Design, Lumpsum, Turnkey" ಯೋಜನೆಯನ್ನಾಗಿ ಅಲ್ಪಾವಧಿ ಟೆಂಡರ್‌ನ್ನು ಕರೆಯಲು ಪಾಲಿಕೆಯ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿ ಹಾಗೂ ಸದರಿ ಕಾಮಗಾರಿಗೆ ರಾಜ್ಯ ಮಟ್ಟದ ಸಂಚಾಲಕ ಸಮಿತಿಯಿಂದ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಅನುಮೋದನೆಗೊಂಡ ಈ ಯೋಜನೆಯನ್ನು ಪಾಲಿಕೆಯ ಸಭೆಯ ನಡವಳಿಯಲ್ಲಿ ದಾಖಲಿಸುವ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:26–08–2013ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:26–08–2013ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ. ಹೆಚ್.ಆರ್.ಕೃಷ್ಣಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>**ನಿರ್ಣಯ:**</u> "ಆಯುಕ್ತರವರ ದಿನಾಂಕ:26–08–2013ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:18-09-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 20 (36)/2013-14

ಬೆಂಗಳೂರು ನಗರದಲ್ಲಿ ಸುಮಾರು 850.0 ಕಿ.ಮೀ. ಉದ್ದದ ರಾಜಕಾಲುವೆ ಇದ್ದು, ಬೆಂಗಳೂರು ನಗರವು ವೇಗವಾಗಿ ಬೆಳೆಯುತ್ತಿರುವುದರ ಪರಿಣಾಮವಾಗಿ, ರಾಜಕಾಲುವೆಗಳ ಸ್ಥಿತಿ ತುಂಬಾ ಹದಗೆಟ್ಟಿರುತ್ತದೆ. ಹಾಲಿ ಇರುವ ರಾಜಕಾಲುವೆಗಳು ಸಮರ್ಪಕವಾದ ವಿನ್ಯಾಸಗಳಿಗೆ ಅನುಗುಣವಾಗಿಲ್ಲದೆ ಇರುವುದರಿಂದ ಹಾಗೂ ರಾಜಕಾಲುವೆಗಳಿಗೆ ಕೈಗಾರಿಕಾ ಕೇಂದ್ರಗಳಿಂದ ನೇರವಾಗಿ ತ್ಯಾಜ್ಯವನ್ನು ಬಿಡುತ್ತಿರುವುದರಿಂದಲೂ, ಒಳಚರಂಡಿ ನೀರು ರಾಜಕಾಲುವೆಯಲ್ಲಿಯೇ ಹರಿಯುತ್ತಿರುವುದಲಿಂದಲೂ ಮತ್ತು ರಾಜಕಾಲುವೆಗಳಲ್ಲಿ ಗಿಡಗೆಂಟೆಗಳು ಬೆಳೆದುಕೊಂಡು ಸಮರ್ಪಕವಾಗಿ ನೀರು ಹರಿಯುವಿಕೆಗೆ ಅಡಚಣೆಯುಂಟಾಗಿ ರಾಜಕಾಲುವೆಗಳ ದುಸ್ಥಿತಿಗೆ ಕಾರಣವಾಗಿರುತ್ತವೆ. ಸಾರ್ವಜನಿಕರು ನೀರು ಕಾಲುವೆಗಳನ್ನು ಮತ್ತು ಕೆರೆ ಬದಿಗಳನ್ನು ಒತ್ತುವರಿ ಮಾಡಿರುವುದರಿಂದ ಕೆರೆಗಳ ಆಂತರಿಕ ಜಲಮಟ್ಟ ಸಹ ಕುಸಿದಿರುತ್ತದೆ.

ಮೇಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ರಾಜಕಾಲುವೆಗಳನ್ನು JNNURM ಯೋಜನೆಯಡಿ ಅಭಿವೃದ್ಧಿ ಪಡಿಸುವ ಯೋಜನೆಯನ್ನು ರೂಪಿಸಲು ಸರ್ಕಾರಿ ಆದೇಶ ಸಂಖ್ಯೆ: UDD 51CSS 2006.Bangalore, Dated: 05-08-2006 ರಲ್ಲಿ ಆಯುಕ್ತರು, ಬಿ.ಬಿ.ಎಂ.ಪಿ. ರವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿರುತ್ತದೆ. ಅದರಂತೆ ತಾಂತ್ರಿಕ ಪರಿಣಿತರೊಂದಿಗೆ ಕೂಲಂಕುಶವಾಗಿ ಚರ್ಚಿಸಿ ಯೋಜನೆಯನ್ನು ತಯಾರಿಸಲಾಗಿರುತ್ತದೆ. ಈ ಯೋಜನೆಯಲ್ಲಿ ರಾಜಕಾಲುವೆಗಳನ್ನು ವಿನ್ಯಾಸಕ್ಕೆ ತಕ್ಕಂತೆ ನಿರ್ಮಾಣ ಮಾಡುವುದು, ನೀರು ಕಾಲುವೆಗಳಲ್ಲಿ ಕೇವಲ ಮಳೆ ನೀರು ಮಾತ್ರ ಹರಿಸುವುದು, ರಾಜಕಾಲುವೆಗಳ ಇಕ್ಕೆಲುಗಳಲ್ಲಿ ಪ್ರತ್ಯೇಕ ಒಳಚರಂಡಿ ವ್ಯವಸ್ಥೆ, ಕೆರೆಗಳಲ್ಲಿ ನೀರು ಶೇಖರಿಸುವುದರೊಂದಿಗೆ ಆಂತರಿಕ ಜಲಮಟ್ಟವನ್ನು ಹೆಚ್ಚಿಸುವುದು, ಮಳೆಗಾಲದಲ್ಲಿ ಕೆರೆಗಳಲ್ಲಿ ಹೆಚ್ಚಿನ ನೀರು ಸಂಗ್ರಹವಾದ ಸಂದರ್ಭದಲ್ಲಿ ಸಮರ್ಪಕವಾಗಿ ನೀರಿನ ಸಮತೋಲನವನ್ನು ಕಾಯ್ದುಕೊಳ್ಳಲು Controlled Gate System ವ್ಯವಸ್ಥೆಯನ್ನು ಅಳವಡಿಸಲಾಗಿದೆ.

ಈ ಯೋಜನೆಯನ್ನು ಮಾಸ್ಟರ್ ಪ್ಲಾನ್‌ನಲ್ಲಿ ಅಳವಡಿಕೊಳ್ಳಲಾಗಿರುತ್ತದೆ. ಕೇಂದ್ರ ನಗರಾಭಿವೃದ್ಧಿ ಇಲಾಖೆಯ JNNURM ನಿಯಮಾವಳಿ ಅನುಸಾರ ಯೋಜನೆಯನ್ನು ತಯಾರಿಸಲಾಗಿರುತ್ತದೆ. ದಿನಾಂಕ: 16-04-2012 ರಂದು ಜರುಗಿದ 62ನೇ ಪಾಲಿಕೆಯ ತಾಂತ್ರಿಕ ಸಲಹಾ ಸಮಿತಿ (TAC) ಮುಂದೆ ಮಂಡಿಸಲಾಗಿ ಯೋಜನೆಯ ಸಾಧಕಭಾದಕಗಳನ್ನು ಸುದೀರ್ಘ ಹಾಗೂ ಸಮಗ್ರವಾಗಿ ಚರ್ಚಿಸಿದ ನಂತರ ಸಮಿತಿಯು ಯೋಜನೆಯನ್ನು ಕೈಗೆತ್ತಿಕೊಳ್ಳಲು ಒಪ್ಪಿಗೆ ನೀಡಿರುತ್ತದೆ.

ಈ ಯೋಜನೆಯನ್ನು ದಿನಾಂಕ:18-07-2013 ರಂದು ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ 3ನೇ STATE LEVEL STEERING COMMITTEE (SLSC) OF JNNURM ರ ಸಭೆಯಲ್ಲಿ ಮಂಡಿಸಿ ಸಭೆಯ ಅನುಮೋದನೆಯನ್ನು ಸಹ ಪಡೆಯಲಾಗಿದೆ ಹಾಗೂ ಯೋಜನೆಯ ಅನುಮೋದನೆಗಾಗಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಯೋಜನೆಗಳ ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರಮ ಸಂಖ್ಯೆ | ಯೋಜನೆಗಳ ವಿವರ | ಅನುಮೋದಿತ ಮೊತ್ತ ರೂ. ಕೋಟಿಗಳಲ್ಲಿ |
|---|---|---|
| 1 | Sewarage diversion and flood mitigation to improve the environmental conditions near water bodies at Dasarahalli zone –I in BBMP Area | 428.64 |
| 2 | Sewarage diversion and flood mitigation to improve the environmental conditions near water bodies at Dasarahalli zone-II in BBMP Area. | 210.20 |
| 3 | Sewarage diversion and flood mitigation to improve the environmental conditions near water bodies at Yelahanka zone in BBMP Area. | 339.44 |
| 4 | Sewarage diversion and flood mitigation to improve the environmental conditions near water bodies at Mahadevapura zone in BBMP Area. | 350.00 |
| | **Total** | **1328.28** |

............2

ಈ ಯೋಜನೆಯಡಿಯಲ್ಲಿ ಇತ್ತೀಚೆಗೆ ಪಾಲಿಕೆಗೆ ಸೇರ್ಪಡೆಯಾದ ಹೊರ ವಲಯಗಳಾದ ದಾಸರಹಳ್ಳಿ, ಯಲಹಂಕ ಮತ್ತು ಮಹದೇವಪುರ ಗಳು ಸೇರ್ಪಡೆಯಾಗಿರುತ್ತವೆ. ಈ ಮೂರು ವಲಯಗಳ ಯೋಜನಾ ವೆಚ್ಚ 1328.28 ಕೋಟಿಗಳಾಗಿದ್ದು, ಇದರಲ್ಲಿ ಕೇಂದ್ರ ಸರ್ಕಾರ ಶೇಕಡ 35, ರಾಜ್ಯ ಸರ್ಕಾರ ಶೇಕಡ 15 ಮತ್ತು ಪಾಲಿಕೆ ಶೇಕಡ 50 ರ ಹಣ ಭರಿಸುವ ಒಡಂಬಡಿಕೆಗೆ ಒಳಪಟ್ಟಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಜೆ.ಎನ್.ಎನ್.ಯು.ಆರ್.ಎಮ್ ಅಡಿಯಲ್ಲಿ ಸಲ್ಲಿಸಲಾದ ಬೃಹತ್ ನೀರುಗಾಲುವೆ ಯೋಜನೆಗಳ ಪ್ರಸ್ತಾವನೆಗೆ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:28-08-2013 ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:28-08-2013ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ. ಹೆಚ್.ಆರ್.ಕೃಷ್ಣಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:28-08-2013ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:18-09-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 21 (27)/2013-14

ಟಿಪ್ಪಣಿಯಲ್ಲಿ ವಿವರಿಸುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:99, ರಾಜಾಜಿನಗರ 2ನೇ ಬ್ಲಾಕ್ ಪಶ್ಚಿಮ ಕಾರ್ಡ್ ರಸ್ತೆಗೆ ಅಭಿಮುಖವಾಗಿರುವ 20ನೇ ಮುಖ್ಯರಸ್ತೆಗೆ (ಸರ್ವೀಸ್ ರಸ್ತೆಗೆ) "ಬಸವ ಮಂಟಪ ರಸ್ತೆ" ಎಂದು ನಾಮಕರಣ ಮಾಡುವುದೆಂದು ದಿನಾಂಕ:29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:15(302)/2012-13 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರು ಆಕ್ಷೇಪಣೆಗಳು / ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:31-01-2013 ಹಾಗೂ 03-02-2013 ರಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾದ 30 ದಿನಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:99, ರಾಜಾಜಿನಗರ 2ನೇ ಬ್ಲಾಕ್ ಪಶ್ಚಿಮ ಕಾರ್ಡ್ ರಸ್ತೆಗೆ ಅಭಿಮುಖವಾಗಿರುವ 20ನೇ ಮುಖ್ಯರಸ್ತೆಗೆ (ಸರ್ವೀಸ್ ರಸ್ತೆಗೆ) "ಬಸವ ಮಂಟಪ ರಸ್ತೆ" ಎಂದು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 20-03-2013ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ವಾರ್ಡ್ ಸಂಖ್ಯೆ:99, ರಾಜಾಜಿನಗರ 2ನೇ ಬ್ಲಾಕ್ ಪಶ್ಚಿಮ ಕಾರ್ಡ್ ರಸ್ತೆಗೆ ಅಭಿಮುಖವಾಗಿರುವ 20ನೇ ಮುಖ್ಯರಸ್ತೆಗೆ (ಸರ್ವೀಸ್ ರಸ್ತೆಗೆ) "ಬಸವ ಮಂಟಪ ರಸ್ತೆ" ಎಂದು ನಾಮಕರಣ ಮಾಡುವುದು".

ಶ್ರೀ. ಹೆಚ್.ಆರ್.ಕೃಷ್ಣಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ವಾರ್ಡ್ ಸಂಖ್ಯೆ:99, ರಾಜಾಜಿನಗರ 2ನೇ ಬ್ಲಾಕ್ ಪಶ್ಚಿಮ ಕಾರ್ಡ್ ರಸ್ತೆಗೆ ಅಭಿಮುಖವಾಗಿರುವ 20ನೇ ಮುಖ್ಯರಸ್ತೆಗೆ (ಸರ್ವೀಸ್ ರಸ್ತೆಗೆ) "ಬಸವ ಮಂಟಪ ರಸ್ತೆ" ಎಂದು ನಾಮಕರಣ ಮಾಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:18-09-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 22 (28)/2013-14

ಟಿಪ್ಪಣಿಯಲ್ಲಿ ವಿವರಿಸುವಂತೆ, ಪೂಜ್ಯ ಮಹಾಪೌರರ ದಿನಾಂಕ:17-12-2012ರ ಟಿಪ್ಪಣಿಯಲ್ಲಿ ಶ್ರೀ. ಕೆ.ಶ್ರೀನಿವಾಸ್ ರವರು ಸಲ್ಲಿಸಲಾಗಿರುವ ಮನವಿ ಮೇರೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:198ರ ವ್ಯಾಪ್ತಿಯಲ್ಲಿ ಬರುವ ವಾಜರಹಳ್ಳಿ ಗ್ರಾಮದ 100 ಅಡಿರಸ್ತೆ, ತಲಘಟ್ಟಪುರ ಮತ್ತು ಕನಕಪುರ ರಸ್ತೆಗೆ ಸೇರುವ ಗಾಣಿಗರ ಪಾಳ್ಯ ಮುಖ್ಯರಸ್ತೆಯ ನಾಲ್ಕು ರಸ್ತೆ ಸೇರುವ ವೃತ್ತಕ್ಕೆ "ಶ್ರೀ ಕಾನಪ್ಪ ವೃತ್ತ" ಎಂದು ನಾಮಕರಣ ಮಾಡುವ ಬಗ್ಗೆ ಪ್ರಸ್ತಾವನೆಯನ್ನು ನಗರ ಪಾಲಿಕೆ ಸಭೆಯ ಮುಂದೆ ಮಂಡಿಸಲು ಸೂಚಿಸಿರುತ್ತಾರೆ.

ಈ ಬಗ್ಗೆ ಪರಿಶೀಲಿಸಲಾಗಿ ಶ್ರೀ ಕಾನಪ್ಪ ರವರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಿರ್ಮಿಸಿರುವ 100 ಅಡಿ ರಸ್ತೆಗೆ ಉಚಿತವಾಗಿ ಜಮೀನನ್ನು ಬಿಟ್ಟು ಕೊಟ್ಟಿರುತ್ತಾರೆ ಹಾಗೂ ಅನೇಕ ಸಾಮಾಜಿಕ ಸೇವೆಯನ್ನು ಸಲ್ಲಿಸಿರುತ್ತಾರೆ ಎಂದು ತಿಳಿದು ಬಂದಿದ್ದು, ಸದರಿಯವರು ದಿವಂಗತರಾಗಿರುತ್ತಾರೆ.

ಈ ಬಗ್ಗೆ ಸಾರ್ವಜನಿಕ ಪಂಚನಾಮೆ ಜರುಗಿಸಲಾಗಿ ಪ್ರಸ್ತಾವನೆ ಪರವಾಗಿ 34 ಮಂದಿ, ವಿರೋಧವಾಗಿ ಯಾರು ಸಹಿ ಮಾಡದೆ ಇರುವುದು ಕಂಡು ಬಂದಿದೆ.

ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ 1976, 293ನೇ ಪ್ರಕರಣದ (1) ನೇ ಉಪ ಪ್ರಕರಣದ ಅನುಸಾರ ಪ್ರತಿಯೊಂದು ಪ್ರಸ್ತಾವನೆಯನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿಯು 5, 6 ಮತ್ತು 7ನೇ ನಿಯಮಗಳ ಉಪಬಂಧಗಳ ದೃಷ್ಟಿಯಿಂದ ಪರಿಶೀಲಿಸತಕ್ಕದ್ದು ಮತ್ತು ನಗರ ಪಾಲಿಕೆಯು ಗೊತ್ತುವಳಿಯನ್ನು ಅಂಗೀಕರಿಸತಕ್ಕದ್ದು. ಅನಂತರ ಅದನ್ನು, ಕನಿಷ್ಟ ಎರಡು ವೃತ್ತ ಪತ್ರಿಕೆಗಳಲ್ಲಿ ವಿಶೇಷವಾಗಿ, ಕನ್ನಡ ಪತ್ರಿಕೆಗಳಲ್ಲಿ, ಅದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಗೆ ಮಾಹಿತಿಗಾಗಿ ಮತ್ತು ಅದು ಪ್ರಕಟವಾದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸತಕ್ಕದ್ದು. ಮೇಲೆ ಹೇಳಿಕೆ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳು ಬಂದರೆ, ಸದರಿ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಪರಿಶೀಲಿಸುವುದಕ್ಕಾಗಿ, ನಗರ ಪಾಲಿಕೆಯ ಮುಂದಿನ ಸಭೆಯಲ್ಲಿ ಅವುಗಳನ್ನು ಮಂಡಿಸತಕ್ಕದ್ದು. ರಾಜ್ಯ ಸರ್ಕಾರದ ಯಾವುದೇ ನಿರ್ದೇಶನಗಳಿದ್ದರೆ ಅವುಗಳಿಗೆ ಒಳಪಟ್ಟು ಗೊತ್ತುವಳಿಯನ್ನು ಅಂಗೀಕರಿಸಿದ ಮೇಲೆ ಅದರಂತೆ ನಗರ ಪಾಲಿಕೆಯ ಬೀದಿಗೆ ನಾಮಕರಣ ಮಾಡುವುದಕ್ಕೆ ಕ್ರಮ ಕೈಗೊಳ್ಳತಕ್ಕದ್ದೆಂದು ಉಲ್ಲೇಖಿಸಲಾಗಿದೆ.

ಆದುದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:198ರ ವ್ಯಾಪ್ತಿಯಲ್ಲಿ ಬರುವ ವಾಜರಹಳ್ಳಿ ಗ್ರಾಮದ 100 ಅಡಿರಸ್ತೆ, ತಲಘಟ್ಟಪುರ ಮತ್ತು ಕನಕಪುರ ರಸ್ತೆಗೆ ಸೇರುವ ಗಾಣಿಗರ ಪಾಳ್ಯ ಮುಖ್ಯರಸ್ತೆಯ ನಾಲ್ಕು ರಸ್ತೆ ಸೇರುವ ವೃತ್ತಕ್ಕೆ "ಶ್ರೀ ಕಾನಪ್ಪ ವೃತ್ತ" ಎಂದು ನಾಮಕರಣ ಮಾಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:20-02-2013ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 11-03-2013ರ ನಿರ್ಣಯ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ವಾರ್ಡ್ ಸಂಖ್ಯೆ:198ರ ವ್ಯಾಪ್ತಿಯಲ್ಲಿ ಬರುವ ವಾಜರಹಳ್ಳಿ ಗ್ರಾಮದ 100 ಅಡಿರಸ್ತೆ, ತಲಘಟ್ಟಪುರ ಮತ್ತು ಕನಕಪುರ ರಸ್ತೆಗೆ ಸೇರುವ ಗಾಣಿಗರ ಪಾಳ್ಯ ಮುಖ್ಯರಸ್ತೆಯ ನಾಲ್ಕು ರಸ್ತೆ ಸೇರುವ ವೃತ್ತಕ್ಕೆ "ಶ್ರೀ ಕಾನಪ್ಪ ವೃತ್ತ" ಎಂದು ನಾಮಕರಣ ಮಾಡುವುದು".

.....................2

ಶ್ರೀ. ಹೆಚ್.ಆರ್.ಕೃಷ್ಣಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ</u>: "ವಾರ್ಡ್ ಸಂಖ್ಯೆ:198ರ ವ್ಯಾಪ್ತಿಯಲ್ಲಿ ಬರುವ ವಾಜರಹಳ್ಳಿ ಗ್ರಾಮದ 100 ಅಡಿರಸ್ತೆ, ತಲಘಟ್ಟಪುರ ಮತ್ತು ಕನಕಪುರ ರಸ್ತೆಗೆ ಸೇರುವ ಗಾಣಿಗರ ಪಾಳ್ಯ ಮುಖ್ಯರಸ್ತೆಯ ನಾಲ್ಕು ರಸ್ತೆ ಸೇರುವ ವೃತ್ತಕ್ಕೆ "ಶ್ರೀ ಕಾನಪ್ಪ ವೃತ್ತ" ಎಂದು ನಾಮಕರಣ ಮಾಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

# ದಿನಾಂಕ:18-09-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 23 (29)/2013-14

ಟಿಪ್ಪಣಿಯಲ್ಲಿ ವಿವರಿಸುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:65, ಕಾಡುಮಲ್ಲೇಶ್ವರದ ಕೋದಂಡರಾಮಪುರ ಹಳೆ ಈಜುಕೊಳದ ರಸ್ತೆಗೆ ಸಾಹತ್ಯ ಬಂಧು ಪ್ರೋ॥ ಜಿ.ಶ್ರೀನಿವಾಸರಾಜು ರವರ ಹೆಸರನ್ನು ನಾಮಕರಣ ಮಾಡುವುದೆಂದು ದಿನಾಂಕ:29-12-2012 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:333/2012-13 ರಲ್ಲಿ ತೀರ್ಮಾನಿಸಲಾಗಿರುತ್ತದೆ.

ಸದರಿ ವಿಷಯದ ಸಂಬಂಧವಾಗಿ ಸಾರ್ವಜನಿಕರು ಆಕ್ಷೇಪಣೆಗಳು / ಸಲಹೆಗಳು ಇದ್ದಲ್ಲಿ ಸಲ್ಲಿಸಲು ತಿಳಿಸಿ, ಪತ್ರಿಕಾ ಪ್ರಕಟಣೆಯನ್ನು ದಿನಾಂಕ:03-02-2013 ರಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಪತ್ರಿಕಾ ಪ್ರಕಟಣೆಯು ಹೊರಡಿಸಲಾದ 30 ದಿನಗಳ ಕಾಲಾವಕಾಶದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶಗಳು ಇದ್ದು, ಈ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳು ಸ್ವೀಕರಿಸಿರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:65, ಕಾಡುಮಲ್ಲೇಶ್ವರದ ಕೋದಂಡರಾಮಪುರ ಹಳೆ ಈಜುಕೊಳದ ರಸ್ತೆಗೆ ಸಾಹಿತ್ಯ ಬಂಧು ಪ್ರೊ॥ ಜಿ.ಶ್ರೀನಿವಾಸರಾಜು ರವರ ಹೆಸರನ್ನು ನಾಮಕರಣ ಮಾಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:18-03-2013ರ ಟಿಪ್ಪಣಿ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ವಾರ್ಡ್ ಸಂಖ್ಯೆ:65, ಕಾಡುಮಲ್ಲೇಶ್ವರದ ಕೋದಂಡರಾಮಪುರ ಹಳೆ ಈಜುಕೊಳದ ರಸ್ತೆಗೆ ಸಾಹಿತ್ಯ ಬಂಧು ಪ್ರೋ॥ ಜಿ.ಶ್ರೀನಿವಾಸರಾಜು ರವರ ಹೆಸರನ್ನು ನಾಮಕರಣ ಮಾಡುವುದು".

ಶ್ರೀ. ಹೆಚ್.ಆರ್.ಕೃಷ್ಣಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ವಾರ್ಡ್ ಸಂಖ್ಯೆ:65, ಕಾಡುಮಲ್ಲೇಶ್ವರದ ಕೋದಂಡರಾಮಪುರ ಹಳೆ ಈಜುಕೊಳದ ರಸ್ತೆಗೆ ಸಾಹಿತ್ಯ ಬಂಧು ಪ್ರೋ॥ ಜಿ.ಶ್ರೀನಿವಾಸರಾಜು ರವರ ಹೆಸರನ್ನು ನಾಮಕರಣ ಮಾಡುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ.ಎಸ್.ಸತ್ಯನಾರಾಯಣ)
ಮಹಾಪೌರರು

## ದಿನಾಂಕ:18-09-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

### ವಿಷಯದ ಸಂಖ್ಯೆ : 37 / 2013-14

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಕರ್ನಾಟಕ ಇಂಜಿನಿಯರಿಂಗ್ ಒಕ್ಕೂಟ (ರಿ), ಬೆಂಗಳೂರು ರವರು ಸರ್.ಎಂ.ವಿಶ್ವೇಶ್ವರಯ್ಯ ರವರ ಹೆಸರಿನಲ್ಲಿ ಒಂದು ತಾಂತ್ರಿಕ ತರಬೇತಿ ಕೇಂದ್ರ ಮತ್ತು ವಿಶ್ವೇಶ್ವರಯ್ಯ ಸಭಾಂಗಣ ನಿರ್ಮಿಸಲು ಉದ್ದೇಶಿಸಿದ್ದು, ಇದರ ಸಲುವಾಗಿ ನಗರ ಪಾಲಿಕೆಯ ಜಾಗವನ್ನು ಗುತ್ತಿಗೆ ಆಧಾರದ ಮೇಲೆ ಒದಗಿಸಲು ಕೋರಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿದ ಗಾಂಧಿನಗರ 6ನೇ ಅಡ್ಡರಸ್ತೆಯಲ್ಲಿರುವ ನಿವೇಶನ ಸಂಖ್ಯೆ:205 (ಹಳೆ ಸಂಖ್ಯೆ:133) 60x136.5 ಅಡಿಗಳ ಜಾಗವನ್ನು ಕರ್ನಾಟಕ ಇಂಜಿನಿಯರಿಂಗ್ ಒಕ್ಕೂಟ (ರಿ), ಬೆಂಗಳೂರು ರವರಿಗೆ ಗುತ್ತಿಗೆ ಆಧಾರದ ಮೇಲೆ ನೀಡುವ ಬಗ್ಗೆ ಆಯುಕ್ತರು ಅಗತ್ಯ ಕ್ರಮ ಕೈಗೊಳ್ಳುವುದು.

ಶ್ರೀ. ಹೆಚ್.ಆರ್.ಕೃಷ್ಣಪ್ಪ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "ಕರ್ನಾಟಕ ಇಂಜಿನಿಯರಿಂಗ್ ಒಕ್ಕೂಟ (ರಿ), ಬೆಂಗಳೂರು ರವರು ಸರ್.ಎಂ.ವಿಶ್ವೇಶ್ವರಯ್ಯ ರವರ ಹೆಸರಿನಲ್ಲಿ ಒಂದು ತಾಂತ್ರಿಕ ತರಬೇತಿ ಕೇಂದ್ರ ಮತ್ತು ವಿಶ್ವೇಶ್ವರಯ್ಯ ಸಭಾಂಗಣ ನಿರ್ಮಿಸಲು ಉದ್ದೇಶಿಸಿದ್ದು, ಇದರ ಸಲುವಾಗಿ ನಗರ ಪಾಲಿಕೆಯ ಜಾಗವನ್ನು ಗುತ್ತಿಗೆ ಆಧಾರದ ಮೇಲೆ ಒದಗಿಸಲು ಕೋರಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿದ ಗಾಂಧಿನಗರ 6ನೇ ಅಡ್ಡರಸ್ತೆಯಲ್ಲಿರುವ ನಿವೇಶನ ಸಂಖ್ಯೆ:205 (ಹಳೆ ಸಂಖ್ಯೆ:133) 60x136.5 ಅಡಿಗಳ ಜಾಗವನ್ನು ಕರ್ನಾಟಕ ಇಂಜಿನಿಯರಿಂಗ್ ಒಕ್ಕೂಟ (ರಿ), ಬೆಂಗಳೂರು ರವರಿಗೆ ಗುತ್ತಿಗೆ ಆಧಾರದ ಮೇಲೆ ನೀಡುವ ಬಗ್ಗೆ ಆಯುಕ್ತರು ಅಗತ್ಯ ಕ್ರಮ ಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಬಿ..ಎಸ್.ಸತ್ಯನಾರಾಯಣ)
ಮಹಾಪೌರರು